ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 | ಸಂಚಿಕೆ 26 | ಜೂನ್ 29, 1986 | ಬೆಲೆ 80 ಪೈಸೆ

ಪಾಲಿಟ್‌ಬ್ಯೂರೋ ಅಭಿನಂದನೆ

ಪ. ಬಂಗಾಲದಲ್ಲಿ ಇತ್ತೀಚೆಗೆ ನಡೆದ ಪುರಸಭೆಗಳ ಚುನಾವಣೆಯಲ್ಲಿ ಎಡರಂಗಕ್ಕೆ ದೊರೆತ ವಿಜಯಕ್ಕಾಗಿ ಸಿ.ಪಿ.ಐ (ಎಂ) ಪ್ರ. ಕಾರ್ಯದರ್ಶಿ ಇ.ಎಂ.ಎಸ್.ನಂಬೂದಿರಿಪಾಡ್ ಅವರು ಪ. ಬಂಗಾಲದ ಸಿ.ಪಿ.ಐ.(ಎಂ) ರಾಜ್ಯ ಸಮಿತಿಯನ್ನು ಅಭಿನಂದಿಸಿದ್ದಾರೆ.

ಪಟ್ಟಣಗಳ ಜನತೆ ಸಿ.ಪಿ.ಐ.(ಎಂ) ಮತ್ತು ಎಡರಂಗದ ಮೇಲೆ ಮತ್ತೊಮ್ಮೆ ವಿಶ್ವಾಸ ವ್ಯಕ್ತಮಾಡಿದ್ದಾರೆ. ಎಡರಂಗ ಮತ್ತು ಎಡರಂಗ ಸರಕಾರದ ಮೇಲಿನ ಕಾಂಗ್ರೆಸ್ಸಿನವರ ಆಧಾರ ರಹಿತ ಆರೋಪಗಳನ್ನು, ಸುಳ್ಳು ಸುದ್ದಿಗಳನ್ನು ಜನತೆ ನಿರಾಕರಿಸಿದೆಂದು ಅವರು ಹೇಳಿದ್ದಾರೆ.

ಪಾಲಿಟ್‌ಬ್ಯೂರೋ ಹೇಳಿಕೆ

ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಗಡಿ ಚಳುವಳಿ ಸಲ್ಲದು

ನಮ್ಮ ದೇಶದ ಪಂಜಾಬ್ ಮತ್ತಿನ್ನಿತರ ಕಡೆಗಳಲ್ಲಿ ಉಗ್ರಗಾಮಿಗಳ, ಜಾತೀಯವಾದಿಗಳ ಹಿಂಸಾಚಾರ ತೀವ್ರಗೊಂಡು ಜನಜೀವನ ಅಸ್ತ್ಯವಸ್ತವಾಗುತ್ತಿರುವ ಇಂದಿನ ಸಂಧಿಗ್ಧ ರಾಜಕೀಯ ಪರಿಸ್ಥಿತಿಯಲ್ಲಿ ಮಹಾರಾಷ್ಟ್ರ ಸೀಮಾ ಸಮಿತಿಯವರು ಕರ್ನಾಟಕ ಗಡಿಯಲ್ಲಿ ಕನ್ನಡದ ಕಡ್ಡಾಯ ಕಲಿಸುವಿಕೆ ಮತ್ತು ಗಡಿ ಸಮಸ್ಯೆ ಪರಿಹಾರದ ಸಲುವಾಗಿ ಕೈಗೊಂಡಿರುವ ಚಳುವಳಿ "ರಾಜಕೀಯವಾಗಿ ಸಮಂಜಸವಲ್ಲ" ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ. ಗಡಿಪ್ರದೇಶಗಳಲ್ಲಿರುವ ಅಲ್ಪ ಭಾಷಿತರ ಮಕ್ಕಳಿಗೆ ತಮ್ಮ ಭಾಷೆಯಲ್ಲೇ ಶಿಕ್ಷಣ ಪಡೆಯುವ ಪ್ರಜಾಪ್ರಭುತ್ವ ಹಕ್ಕಿದೆ. ದೇಶದ ಯಾವ ಪ್ರದೇಶದಲ್ಲೇ ಆಗಲಿ ಭಾಷಾ ಅಲ್ಪಸಂಖ್ಯಾತರ ಮೇಲೆ ರಾಜ್ಯದ ಭಾಷೆಯನ್ನು ಹೇರುವುದು ಸರಿಯಲ್ಲ.

ಬೆಳಗಾವಿ ಪ್ರಶ್ನೆ ಹಾಗೆಯೇ ಇತರ ಗಡಿ ವಿವಾದಗಳ ಕುರಿತು ಯಾವುದೇ ಪುನರ್ವಿಚಾರ ಮಾಡಬೇಕಾದರೆ ಗ್ರಾಮ ಘಟಕವನ್ನಾಗಿ ಹಿಡಿದು ಭಾಷೆಯ ಸಂಲಗ್ನತೆಯ ಆಧಾರದಲ್ಲಿ ರಾಜ್ಯಗಳ ದೇಶಪ್ರೇಮಿ ಮತ್ತು ಜಾತ್ಯಾತೀತ ಪಕ್ಷಗಳು ಅಂಥ ತಕರಾರುಗಳನ್ನು ಎಲ್ಲರ ಒಪ್ಪಿಗೆಯಿಂದ ಬಗೆಹರಿಸಲು ಪ್ರಯತ್ನ ಮಾಡಬೇಕೆಂದು ಹೇಳಿದೆ. ಆಳುವ ಕಾಂಗ್ರೆಸ್ ಮತ್ತು ಕೆಲವು ವಿರೋಧ ಪಕ್ಷಗಳು ವಿಭಜನಕಾರಿ ಶಕ್ತಿಗಳ ಬೆಳವಣಿಗೆಗೆ ಸಹಾಯಕವಾಗಿವೆ. ಎರಡೂ ಕಡೆಗಳಲ್ಲಿ ಭಾಷೆಯ ಉದ್ರೇಕತೆಯನ್ನು ಎಬ್ಬಿಸಿ ಬೆಳಗಾವಿಯಲ್ಲಿ ಚಳುವಳಿ ಪ್ರಾರಂಭಿಸಿರುವ ಜನತಾ ಮತ್ತು ಕಾಂಗ್ರೆಸ್ (ಎಸ್) ಪಕ್ಷಗಳನ್ನು ಪಿ. ಬಿ. ಟೀಕಿಸಿದೆ. ಪ್ರಜಾಪ್ರಭುತ್ವ ತತ್ವಗಳ ಆಧಾರದಲ್ಲಿ ಇಬ್ಬರಿಗೂ ಒಪ್ಪಿಗೆಯಾಗುವಂತೆ ಒಂದು ಒಪ್ಪಂದ ಚರ್ಚೆಯ ನಂತರ ಹೊರಬೀಳಬಹುದೆಂದು ಅದು ಅಪೇಕ್ಷಿಸಿದೆ.

ರಾಜೀವ ಗಾಂಧಿ ಸರಕಾರ ಮುಸ್ಲಿಂ ಮೂಲಭೂತವಾದಿಗಳಿಗೆ ಶರಣಾಗತವಾಗಿರುವುದರಿಂದಲೇ ಹಿಂದೂ ಮೂಲಭೂತ ವಾದಿಗಳಿಗೆ ಪ್ರೋತ್ಸಾಹ ಸಿಕ್ಕಿದಂತಾಗಿದೆಂದು ಪಿ. ಬಿ. ಆರೋಪಿಸಿದೆ. ಈ ರೀತಿ ಎರಡು ಜಾತಿಗಳ ಎರಡು ಕೇಂದ್ರಗಳು ಹುಟ್ಟಿಕೊಳ್ಳುವಂತೆ ಮಾಡಿರುವುದರಿಂದ, ಜಾತೀಯವಾದಿಗಳೂ, ಛಿದ್ರಕಾರಿ ಶಕ್ತಿಗಳೂ ಇಂದಿನ ಗಂಭೀರ ಆರ್ಥಿಕ ಪರಿಸ್ಥಿತಿಯಲ್ಲಿ ಜನರ ಗಮನವನ್ನು ಬೇರೆಡೆಗೆ ತಿರುಗಿಸಿ, ಅಪಾರ್ಥ ಉಂಟಾಗುವಂತೆ ಮಾಡಿದೆ.

ಪಂಜಾಬ್ ಪರಿಸ್ಥಿತಿಯನ್ನು ವಿಮರ್ಶಿಸಿ, ಹಲವಾರು ಕಮಿಶನ್‌ಗಳನ್ನು ನೇಮಿಸುವುದರಿಂದಾಗಿ ಪಂಜಾಬಿನ ಸಮಸ್ಯೆ ಮತ್ತಷ್ಟು ಹದಗೆಟ್ಟಿದೆಂದೂ ಬರ್ನಾಲ ಮಂತ್ರಿ ಮಂಡಲ ರಾಷ್ಟ್ರ ವಿರೋಧಿ ಶಕ್ತಿಗಳ ಕುರಿತು ಸರಿಯಾದ ನಿಲುವು ಅನುಸರಿಸುತ್ತಿದೆಂದೂ, ಪ್ರಕಾಶ ಸಿಂಗ್ ಬಾದಲ್ ಮತ್ತು ಅವನ ಸಂಗಡಿಗರು ರಾಷ್ಟ್ರ ವಿರೋಧಿಗಳ ಜೊತೆಯಲ್ಲಿ ಸೇರಿಕೊಂಡಿದ್ದಾರೆಂದೂ ಪಿ. ಬಿ. ಆರೋಪಿಸಿದೆ. ರಾಜಕೀಯ ಅಧಿಕಾರ ಪಡೆಯುವ ಸಲುವಾಗಿ ಸಂದರ್ಭ ಸಾಧಕ ರಾಜಕಾರಣಿಗಳು ಎಷ್ಟು ಕೆಳಮಟ್ಟಕ್ಕಿಳಿಯುತ್ತಾರೆಂಬುದನ್ನು ಅದು ತೋರಿಸಿಕೊಡುತ್ತದೆ. ಪಂಜಾಬಿನಲ್ಲಿ ಅಲ್ಪ ಸಂಖ್ಯಾತರನ್ನು ರಕ್ಷಿಸಲು ಇತರ ರಾಜ್ಯಗಳಲ್ಲಿ ಜಾತೀವಾದಿಗಳು ದೇಶವನ್ನು ದುರ್ಬಲಗೊಳಿಸುವ ಶಕ್ತಿಗಳಿಗೆ ಪ್ರಚೋದನೆ ನೀಡದಂತೆ ತಡೆಯಿಡಿಯಬೇಕೆಂದು ಪಿ. ಬಿ. ಹೇಳಿದೆ.

ಕೇರಳದಲ್ಲಿ ಕಾಂಗ್ರೆಸ್ ಮತ್ತೊಮ್ಮೆ ರಾಷ್ಟ್ರವಿರೋಧಿ ಪ್ರತಿಗಾಮಿ ಶಕ್ತಿಗಳಿಗೆ ಶರಣಾಗತವಾಗಿದೆ. ರಾಷ್ಟ್ರವಿರೋಧಿ ಹೇಳಿಕೆಗಳಿಗಾಗಿ ಮೊದಲು ಒಬ್ಬ ಮಂತ್ರಿಯನ್ನು ತೆಗೆದುಹಾಕಲಾಗಿತ್ತು. ಅವನನ್ನೆ ಮತ್ತೆ ಮಂತ್ರಿಮಂಡಲದಲ್ಲಿ ಸೇರಿಸಲಾಗಿದೆ. ಹಾಗೆಯೇ ಅನಪೇಕ್ಷಿತ ವಿದೇಶಿಯರಿಗೆ ಸರಕಾರದ ಅತಿಥಿಗಳಾಗಿ ಪ್ರವೇಶ ಕೊಟ್ಟಿರುವವರನ್ನು ಮಂತ್ರಿ ಮಂಡಲದಲ್ಲಿ ಮುಂದುವರಿಸಲಾಗಿದೆ. ಕೇರಳದಲ್ಲಿ ಕಾಂಗ್ರೆಸ್ ಹಾಗೆಯೇ ಅದರ ಅಖಿಲ ಭಾರತ ಮುಖಂಡತ್ವ ಅಧಿಕಾರದಲ್ಲುಳಿಯಲು ಎಷ್ಟು ಕೆಳಮಟ್ಟಕ್ಕಿಳಿಯಲೂ ಕೂಡ ತಯಾರಿದೆಂಬುದನ್ನು ತೋರಿಸಿಕೊಡುತ್ತದೆಂದು ಪಿ. ಬಿ. ಅಭಿಪ್ರಾಯ ಪಟ್ಟಿದೆ ○

ವಿಧಾನ ಪರಿಷತ್ ಚುನಾವಣೆ

ಕರ್ನಾಟಕದ ವಿಧಾನ ಪರಿಷತ್ತಿಗೆ ಇತ್ತೀಚೆಗೆ ನಡೆದ ಶಿಕ್ಷಕರ ಮತ್ತು ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಉಮೇದುವಾರರನ್ನು ಸೋಲಿಸಿ ಜನತಾ ಪಕ್ಷದ ಮತ್ತು ಅದರ ಬೆಂಬಲಿತ ನಾಲ್ಕು ಉಮೇದುವಾರರನ್ನು ಜಯಗೊಳಿಸಿದ್ದಕ್ಕಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷದ ಕರ್ನಾಟಕ ರಾಜ್ಯ ಸಮಿತಿ ಮತದಾರರನ್ನು ಅಭಿನಂದಿಸುತ್ತದೆ.

ಕೌನ್ಸಿಲ್ ಚುನಾವಣೆಯಲ್ಲಿ ಗಳಿಸಿದ ವಿಜಯದಿಂದಾಗಿ ಜನತಾ ಪಕ್ಷ ಆತ್ಮವಿಶ್ವಾಸ ಮಾತ್ರ ಪಡೆಯದೆ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಸಹಕಾರ ಹಾಗೂ ಸಹಾಯದಿಂದ ಸಾರ್ವಜನಿಕರು, ಅದರಲ್ಲೂ ಮುಖ್ಯವಾಗಿ ಕಾರ್ಮಿಕರು ಮತ್ತು ರೈತರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಲು ತುರ್ತು ಕ್ರಮ ಕೈಗೊಳ್ಳಬೇಕೆಂದು ಸಿ.ಪಿ.ಐ. (ಎಂ) ಕೇಳಿಕೊಳ್ಳುತ್ತದೆ.

ಇಷ್ಟು ವರ್ಷ ಈ ಕ್ಷೇತ್ರಗಳು ಬಿ.ಜೆ.ಪಿ. ಮತ್ತು ಕಾಂಗ್ರೆಸ್ಸಿನ ಗುತ್ತಿಗೆಯಾಗಿದ್ದವು. ಈಗ ಸುಶಿಕ್ಷಿತ ವರ್ಗದಲ್ಲಿ ಹೊಸ ವಿಚಾರಧಾರೆ ಮಾಡಬರುತ್ತಿರುವುದು ಸ್ವಾಗತಾರ್ಹ. ಸಮಾಜದ ಸಮಗ್ರ ಬದಲಾವಣೆಯ ದೃಷ್ಟಿಯಿಂದ ಸುಶಿಕ್ಷಿತ ಜನ ಪರ್ಯಾಯ ವ್ಯವಸ್ಥೆಯ ಕುರಿತು ಮನನ ಮಾಡಿ ಎಡಶಕ್ತಿಗಳತ್ತ ವಾಲುವುದು ಅತ್ಯಗತ್ಯ. ಅದಾಗದೆ ಶಿಕ್ಷಣ ನೀತಿ, ನಿರುದ್ಯೋಗ, ಮಧ್ಯಮ ವರ್ಗದ ಆರ್ಥಿಕ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು ಕಷ್ಟ. ಆ ದಿಸೆಯಲ್ಲಿ ಸುಶಿಕ್ಷಿತ ಜನ ವಿಚಾರ ಮಾಡಲೆಂದು ಸಿ. ಪಿ. ಐ. (ಎಂ) ಹಾರೈಸುತ್ತದೆ.

ಗಡಿ ಚಳುವಳಿಯಲ್ಲಿ ನಾವು ಏಕೆ ಭಾಗವಹಿಸಲಿಲ್ಲ

ಮಹಾರಾಷ್ಟ್ರ ಸಿ.ಪಿ.ಐ.(ಎಂ) ಪಕ್ಷದ ನಿಲುಮೆ

ಮೇ 5 ಮತ್ತು 26ರ ಸೀಮಾಸಮಿತಿಯ ಸಮಾವೇಶದಲ್ಲಿ ನಾವು ಭಾಗವಹಿಸಲಿಲ್ಲ. ಗಡಿ ಚಳುವಳಿ ನಡೆಸಿದರೆ ಅದು ಹಿಂಸಾತ್ಮಕವಾಗುತ್ತದೆ. ಜನರು ಕಷ್ಟಕ್ಕೊಳಗಾಗುತ್ತಾರೆ. ಆದ್ದರಿಂದ ಚಳುವಳಿ ಬೇಡವೆಂದು ನಾವು ಹೇಳಿದ್ದೆವು. ಆ ಸಮ್ಮೇಳನದ ನಂತರ ಕೋಲ್ಹಾಪುರ, ಬೆಳಗಾವಿ, ನಿಪ್ಪಾಣಿ, ಮೊದಲಾದೆಡೆಗಳಲ್ಲಿ ಭಾಷೆಯ ಕುರಿತು ದಂಗೆ ನಡೆದು ನಮ್ಮ ನಿಲುಮೆಯನ್ನು ದೃಢಪಡಿಸಿದೆ. ಹಾಗಿದ್ದರೂ ಚಳುವಳಿ ಕುರಿತು ಪುನರ್ವಿಚಾರ ಮಾಡಬೇಕೆಂದು ವಿರೋಧ ಪಕ್ಷದವರಿಗೆ ಅನಿಸದಿರುವುದು ದುರದೃಷ್ಟಕರ.

ಕಳೆದ ಕೆಲವು ದಿವಸಗಳಿಂದ ನಾಸಿಕ್, ಔರಂಗಬಾದ್, ಮನಮಾಡ ಮತ್ತಿತರ ಕಡೆಗಳಲ್ಲಿ ಹಿಂದೂ-ಮುಸ್ಲಿಂ, ಹಿಂದೂ-ದಲಿತರ ಮಧ್ಯ ನಡೆದ ದಂಗೆ ಯಾವ ನಾಗರೀಕನಲ್ಲಿಯಾದರೂ ಜಾತೀಯ ಐಕ್ಯ ಸಾಧಿಸುವ ಮನೋಭಾವವನ್ನು ನಿರ್ಮಿಸುತ್ತದೆ. ಈ ದಂಗೆಗಳಲ್ಲಿ ಕೆಲವು ಜಾತ್ಯಾಂಧರ, ಮೂಲಭೂತವಾದಿಗಳ ಕೈವಾಡವಿದೆಂಬ ನಮ್ಮ ಅನಿಸಿಕೆಗೆ ಈಗ ಪುರಾವೆ ಸಿಕ್ಕಿದೆ. ಈ ದಂಗೆಯಿಂದಾಗಿ ಜನರು ಕಷ್ಟಕ್ಕೊಳಗಾಗಿರುವಾಗ ಕಾಯಿದೆ-ಕಾನೂನಿನ ಪ್ರಶ್ನೆ ಎದ್ದಿರುವಾಗ, ಗಡಿ ಭಾಗದ 5 ಜಿಲ್ಲೆಗಳಲ್ಲಿ ಮರಾಠಿ-ಕನ್ನಡ ಮಾತಾಡುವವರ ಮಧ್ಯೆ ದ್ವೇಶ ಹುಟ್ಟಿಸುವುದು ಅಪಾಯಕಾರಿಯಾಗಿದೆ. ಹಾಗೆಯೇ ಮಹಾರಾಷ್ಟ್ರ, ಪಂಜಾಬ್ ಆದೀತೆಂಬ ಹೇಳಿಕೆ ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ಪಕ್ಷಗಳಿಗೆ ಶೋಭಿಸುವುದಿಲ್ಲ.

ಈಗ ವಾಸ್ತವಿಕವಾಗಿ ರಾಜ್ಯದ ಜನತೆ ಭೀಕರ ಬರ, ಬೆಲೆ ಹೆಚ್ಚಳ, ಕುಡಿಯುವ ನೀರು, ನಿರುದ್ಯೋಗಗಳಂಥ ಜ್ವಲಂತ ಸಮಸ್ಯೆಗಳನ್ನೆದುರಿಸುತ್ತಿದ್ದಾರೆ. ಕೇಂದ್ರದ ವಿರುದ್ಧ ರಾಜ್ಯಾದ್ಯಂತ ಚಳುವಳಿ ನಡೆಯುತ್ತಿದೆ. ಮೇವು-ನೀರಿಗಾಗಿ ಗ್ರಾಮಾಂತರ ಪ್ರದೇಶದ ಜನ ಹೋರಾಡುತ್ತಿದ್ದಾರೆ.

ಹತ್ತಿ ಖರೀದಿ ಕುರಿತು ಉಂಟಾಗಿರುವ ಅನ್ಯಾಯದ ವಿರುದ್ಧ ರೈತರು "ರಸ್ತೆ ರೋಖೋ" ಚಳುವಳಿ ನಡೆಸಿದ್ದಾರೆ. ಸರಕಾರವೇ ಹತ್ತಿ ಕೊಳ್ಳುವ ಯೋಜನೆ ಜಾರಿಯಲ್ಲಿಲ್ಲವಿದ್ದರೆ ಜೂನ್ ನಂತರ ರಾಜ್ಯಾದ್ಯಂತ ರಸ್ತೆ ರೋಖೋ ಚಳುವಳಿ ನಡೆಸಲಾಗುವುದೆಂದು ರೈತ ಸಂಘ ನೋಟೀಸು ಕೊಟ್ಟಿದೆ.

ಕೇಂದ್ರ ಸರಕಾರದ ಆರ್ಥಿಕ

(ಕೊನೆಯ ಪುಟಕ್ಕೆ)

ಅಸ್ಸಾಂನಲ್ಲಿ ಮತ್ತೆ ಚಳುವಳಿ ?

—ಎನ್. ಕೆ. ಉಪಾಧ್ಯಾಯ

ಚಳುವಳಿಯ ಮುಂದಾಳದಲ್ಲಿದ್ದ ಅಸ್ಸಾಂ ಗಣಪರಿಷತ್ ವಿಧಾನ ಸಭೆಯ ಚುನಾವಣೆಯಲ್ಲಿ ಬಹುಮತ ಪಡೆದು ತನ್ನದೇ ಆದ ಸರಕಾರ ರಚಿಸಿದ ಒಂದು ವರ್ಷ ಮುಗಿಯುವುದರೊಳಗಾಗಿಯೇ (ಆಗಸ್ಟಿಗೆ ಒಂದು ವರ್ಷವಾಗುತ್ತದೆ), ಆ ಪಕ್ಷದ ಅಂಗವಾದ ಅಸ್ಸಾಂ ವಿದ್ಯಾರ್ಥಿ ಸಂಘಟನೆ ಜೂ 13 ರಂದು ಪ್ರತಿಭಟನಾ ದಿನಾಚರಣೆ ಆಚರಿಸಿ, ತನ್ನದೇ ಸರಕಾರಕ್ಕೆ ಎಚ್ಚರಿಕೆ ನೀಡಿದೆ. ಅಷ್ಟೇ ಅಲ್ಲ ಹೋದ ವರ್ಷ ಕೇಂದ್ರ ಸರಕಾರದೊಡನಾದ ಒಪ್ಪಂದವನ್ನು ಆಗಸ್ಟ 15ರೊಳಗೆ ಜ್ಯಾರಿಯಲ್ಲಿ ತಾರದಿದ್ದರೆ, ಮತ್ತೊಮ್ಮೆ ಭೀಕರ ಚಳುವಳಿ ಹೂಡುವ ಎಚ್ಚರಿಕೆಯನ್ನೂ ಕೊಟ್ಟಿದೆ.

ಅತ್ಯಾವಶ್ಯಕ ವಸ್ತುಗಳ ಬೆಲೆಯೇರಿಕೆಯನ್ನು ತಡೆಗಟ್ಟುವುದರಲ್ಲಿ ಮಹಾಂತ ಸರಕಾರ ವಿಫಲವಾಗಿರುವುದರ ವಿರುದ್ಧ ತಾ. 13 ರಂದು ಪ್ರತಿಭಟನಾದಿನ ಆಚರಿಸಲಾಯಿತು ಹೊಸ ಸರಕಾರದ ಆಡಳಿತ ಸಮಾಧಾನಕಾರಕವಾಗಿಲ್ಲೆಂದೇ ಅವರ ಅಭಿಪ್ರಾಯ.

ಕೇಂದ್ರ ಸರಕಾರ ಅಸ್ಸಾಂ ಗಣಪರಿಶತ್ ಜೊತೆಯಲ್ಲಿ ಮಾಡಿಕೊಂಡ ಒಪ್ಪಂದದಿಂದಾಗಿಯೇ ಆ ಪಕ್ಷ ಚುನಾವಣೆಯಲ್ಲಿ ಗೆದ್ದಿತ್ತು. ಆದರೆ ಅಧಿಕಾರಕ್ಕೆ ಬಂದ ನಂತರ ಒಪ್ಪಂದದ ಕರಾರುಗಳನ್ನು ಜ್ಯಾರಿ ಮಾಡುವಲ್ಲಿ ಸರಕಾರ ವಿಫಲವಾಗಿದೆಂಬ ಆರೋಪ ವಿದ್ಯಾರ್ಥಿಗಳಿಂದಲೂ, ಪರಿಷತ್ತಿನ ಗಣ್ಯ ವ್ಯಕ್ತಿಗಳಿಂದಲೂ ಕೇಳಿಬರುತ್ತಿದೆ. ಅಸ್ಸಾಂನ ಆರ್ಥಿಕ ಬೆಳವಣಿಗೆ, ವಿದೇಶಿಯರನ್ನು ಗುರ್ತಿಸಿ ಗಡಿಪಾರು ಮಾಡುವುದು, ಭಾಷೆ, ಸಂಸ್ಕೃತಿಯ ಬೆಳವಣಿಗೆ ಇವುಗಳ ಕುರಿತು ಕೇಂದ್ರ-ರಾಜ್ಯ ಸರಕಾರಗಳು ಕಾಲೆಳೆಯುತ್ತಿವೆ. ನಿಷ್ಠೆಯಿಂದ ಕಾರ್ಯಪ್ರವೃತ್ತರಾಗಿಲ್ಲೆಂಬ ಮುಖ್ಯ ಆರೋಪ ಕೇಳಿಬರುತ್ತಿದೆ. ಬಂಗ್ಲಾದೇಶದ ಗಡಿಯಲ್ಲಿ ತಂತಿ ಹಾಕಿ ನಿರಾಶ್ರಿತರನ್ನು ತಡೆಯುವ ಕೆಲಸ ನಡೆದೇ ಇಲ್ಲೆಂಬ ಅಪಾದನೆ ಕೇಂದ್ರ ಸರಕಾರದ ಮೇಲೆ ಹೊರಿಸಿದ್ದಾರೆ.

ಪಂಜಾಬಿನ ಒಪ್ಪಂದವನ್ನು ಕಾಲಮಿತಿಗನುಸಾರ ಜ್ಯಾರಿಗೊಳಿಸಲು ಕೇಂದ್ರ ವಿಫಲವಾಗಿದೆ. ಭಯೋತ್ಪಾದಕರ ಹತ್ಯಾಕಾಂಡವನ್ನು ತಡೆಯಲು ಪಂಜಾಬ ಸರಕಾರ ವಿಫಲವಾಗಿದೆ. ಕೇಂದ್ರ ಸರಕಾರದ ಅನಿಶ್ಚಿತ ಧೋರಣೆ ಪಂಜಾಬ-ಹರಿಯಾಣ ಜನರಲ್ಲಿ ದ್ವೇಷ ಬೆಳೆಯಲಿಕ್ಕೂ, ಛಿದ್ರಕಾರಿಗಳಿಗೆ ತಮ್ಮ ಚಟುವಟಿಕೆಗಳನ್ನು ಹೆಚ್ಚಿಸಲು ಅವಕಾಶ ಮಾಡಿಕೊಟ್ಟಿದೆ.

ರಾಜೀವ ಸರಕಾರ ಪಂಜಾಬಿನಂತೆಯೇ ಅಸ್ಸಾಂನಲ್ಲಿ ಕೂಡ ಅಸ್ಸಾಂ ಗಣಪರಿಷತ್ ಜೊತೆಯಲ್ಲಿ ಮಾಡಿಕೊಂಡ ಒಪ್ಪಂದವನ್ನು ಜಾರಿ ಮಾಡುವಲ್ಲಿ ವಿಫಲರಾಗಿದ್ದಾರೆ. ಆ ಒಪ್ಪಂದ ಸಾಧುವಲ್ಲೆಂದು ಸಿ.ಪಿ ಐ. (ಎಂ) ಅದನ್ನು ವಿರೋಧಿಸಿತ್ತು. ಅಸ್ಸಾ, ಮಿಜೋರಾಂ, ಮೇಘಾಲಯ, ಮಣಿಪುರ, ತ್ರಿಪುರಗಳನ್ನೊಳಗೊಂಡು ಈಶಾನ್ಯದ ರಾಜ್ಯಗಳೆಲ್ಲ ಆರ್ಥಿಕವಾಗಿಯೂ ಸಂಪರ್ಕದಲ್ಲಿಯೂ ಬಹಳ ಹಿಂದುಳಿದಿವೆಂದೂ, ಕೇಂದ್ರ ಸರಕಾರ ರಾಜ್ಯಗಳಿಗೆ ಹೆಚ್ಚು ಹಣ ಅಭಿವೃದ್ಧಿ ಕಾರ್ಯದಲ್ಲಿ ವಿನಿಯೋಗಿಸಬೇಕೆಂದು ಸಿ. ಪಿ. ಐ. (ಎಂ) ಒತ್ತಾಯಿಸುತ್ತ ಬಂದಿತ್ತು. ಆ ಪ್ರದೇಶದಲ್ಲಿ ನೀರಾವರಿ ಯೋಜನೆಗಳಿಲ್ಲ, ಬ್ರಹ್ಮಪುತ್ರ ನದಿಯ ನೀರನ್ನು ಉಪಯೋಗಿಸಿ ಅಸ್ಸಾಂಗೆ ನೀರು ಪೂರೈಸಿ, ಸದ್ಯ ಒಂದೇ ಬೆಳೆ ಬೆಳೆಯುವುದನ್ನು ತಪ್ಪಿಸಿ, ರೈತರಿಗೆ ನಾನಾ ತರದ ಬೆಳೆ ಬೆಳೆಯಲು ಅವಕಾಶ ಮಾಡಿಕೊಡಬಹುದಾಗಿದೆ. ಭಾರತದ ಇತರ ರಾಜ್ಯಗಳಿಗೂ ಅಸ್ಸಾಂ ಮತ್ತಿತರ ಆ ಪ್ರದೇಶದ ರಾಜ್ಯಗಳಿಗೂ ತೀವ್ರ ಸಂಪರ್ಕ ಅವಕಾಶದ ರೇಲ್ವೆಗಳಿಲ್ಲ, ರಸ್ತೆಗಳಿಲ್ಲ, ನದಿಗಳನ್ನು ಜೋಡಿಸಿ, ಹಡಗು ಯಾನಕ್ಕೂ ವ್ಯವಸ್ಥೆಯಿಲ್ಲ. ಪಾಳೆಯಗಾರಿ ಪದ್ಧತಿಯನ್ನು ನಿರ್ನಾಮ ಮಾಡಲು, ಭೂಸುಧಾರಣೆ, ನಿರುದ್ಯೋಗ ನಿವಾರಣೆಗೆ ದೊಡ್ಡ ಕೈಗಾರಿಕೆಗಳ ಸಾಧನೆ ಕುರಿತು ಕೇಂದ್ರ ಸರಕಾರ ಗಮನ ಹರಿಸುತ್ತಿಲ್ಲ, ಅಂಥ ಹಿಂದುಳಿದಿರುವಿಕೆಯಿಂದಾಗಿ ಅಮೇರಿಕನ್ ಸಾಮ್ರಾಜ್ಯಶಾಹಿಗೆ, ಕ್ರಿಶ್ಚನ್ ಮಿಶಿನರಿಗಳಿಗೆ ದೇಶ ವಿಭಜಕ ಚಟುವಟಿಕೆಗಳನ್ನು ತೀವ್ರಗೊಳಿಸಲು ಅವಕಾಶ ಸಿಕ್ಕಿದೆ. ಆದ್ದರಿಂದ ಆ ಪ್ರದೇಶಕ್ಕೆ ಹೆಚ್ಚು ಗಮನ ಹರಿಸುವುದು ಅತ್ಯಗತ್ಯವೆಂದು ಸಿ.ಪಿ.ಐ.-(ಎಂ) ಹೇಳುತ್ತ ಬಂದಿದೆ.

ಈಗ ಅಸ್ಸಾಂ ಗಣಪರಿಶತ್ ಅಧಿಕಾರಕ್ಕೆ ಬಂದ ನಂತರ ರಾಜೀವ ಗಾಂಧಿ ಜೊತೆಯಲ್ಲಾದಒಪ್ಪಂದವನ್ನು ಜಾರಿಗೆ ತರಲು ಒತ್ತಾಯದ ಚಳುವಳಿ ನಡೆದಿದೆ. ಬಾಂಗ್ಲಾ ದೇಶದುದ್ದಕ್ಕೂ ತಂತಿಬೇಲಿ ಹಾಕುವ ಕರಾರು ಅದರಲ್ಲೊಂದು, ಅದರ ಸಲುವಾಗಿ ರೂ. 5000 ಕೋಟಿಗಿಂತಲೂ ಹೆಚ್ಚು ಹಣ ಖರ್ಚಾಗಬಹುದೆಂಬ ಅಂದಾಜಿದೆ. ಬಂಗ್ಲಾ ಸರಕಾರ ಈ ಯೋಜನೆಗೆ ಒಪ್ಪಲಿಲ್ಲ. ಬಂಗ್ಲಾ ಗಡಿಯಲ್ಲಿ ಕಾವಲು ಪೋಲೀಸರು ಸರಿಯಾಗಿ ಕೆಲಸಮಾಡಿ ಈ ಸಮಸ್ಯೆ ಬಗೆಹರಿಸಬಹುದಾಗಿದೆ. ಬೇಲಿಗಾಗಿ ಅಷ್ಟು ಹಣ ಖರ್ಚು ಮಾಡುವ ಶಕ್ತಿ ಕೇಂದ್ರ ಸರಕಾರಕ್ಕಿಲ್ಲ ಅದು ಕಾಗದದ ಒಪ್ಪಂದವಾಗಿಯೇ ಉಳಿಯಬಹುದಾಗಿದೆ.

ಶಿಕ್ಷಣದ ಮಾಧ್ಯಮ ಅಸ್ಸಾಮಿ ಭಾಷೆಯಾ[illegible]ಕೆಂದು ನಿರ್ಧರಿಸಲಾಗಿದೆ, ಅ[illegible] ಭಾಷಿಕರ ಮೇಲೂ ಅದನ್ನು ಹೇರಲಾಗಿದೆ. ಬಂಗಾಲಿಗಳು ಬಹು ಸಂಖ್ಯಾಕರಾಗಿರುವ ಚಚಾರ ಮತ್ತು ಕರೀಂಗಂಜ ಜಿಲ್ಲೆಗಳಲ್ಲಿ ಅಸ್ಸಾಂ ಭಾಷೆಯಲ್ಲಿ ಶಿಕ್ಷಣ ಕಡ್ಡಾಯಗೊಳಿಸುವ ನಿರ್ಣಯ ಆ ಜನರಲ್ಲಿ ಅಸಮಾಧಾನ ಉಂಟು ಮಾಡಿದೆ. ಹಾಗೆಯೇ ಬೊರೋ ಗುಡ್ಡಗಾಡು ಜನರಲ್ಲಿಗೂ ಅಸಮಾಧಾನವಿದೆ. ಅಸ್ಸಾಂನಲ್ಲಿ 20 ವರ್ಷ ವಾಸಿಸಿದವರಿಗೆ ಮಾತ್ರ ಕಾಯಂ ನಾಗರಿಕ ಹಕ್ಕಿನ ಸರ್ಟಿಫಿಕೇಟು ನೀಡುವ ಹೊಸ ಸರಕಾರದ ನಿರ್ಣಯ ಗೊಂದಲ ಉಂಟು ಮಾಡಿದೆ. ಯಾಕಂದರೆ ನೌಕರಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಕ್ಕೆ ಅಂಥ ಸರ್ಟಿಪಿಕೇಟು ಅಗತ್ಯ. ಯಾರ ವಿರುದ್ಧ ತಕರಾರು ಮಾಡಲಾಗುವುದೋ ಅವರೇ ತಾವು ಅಸ್ಸಾಮಿ ನಾಗರಿಕನೆಂಬುದನ್ನು ಪುರಾವೆ ಸಹಿತ ತೋರಿಸಬೇಕಂತೆ. ನಮ್ಮಲ್ಲಿಯಂತೆಯೇ ಅಸ್ಸಾಂನಲ್ಲಿ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಜನ್ಮನೊಂದಣಿ ಮಾಡಿಕೊಳ್ಳುವುದು ಕಡಿಮೆ. ಬರೇ ಕೂಲಿ ಮಾಡುವ ಜನರಿಗೆ ತಮ್ಮ ಜನ್ಮದಾಖಲೆಯಾಗಲಿ ಬೇರೆ ಕಾಗದ ಪತ್ರಗಳಾಗಲಿ ಲಭ್ಯವಾಗುವುದು ಕಷ್ಟ. ಒಬ್ಬನಿಗೆ ಬೇಡಾದವರು ನೀನು ಅಸ್ಸಾಮಿ ಎಂಬುದಕ್ಕೆ ಪುರಾವೆ ಕೊಡಬೇಕೆಂದು ಹೇಳಿ ದ್ವೇಷ ತೀರಿಸಿಕೊಳ್ಳಬಹುದು ಅದರಿಂದಾಗಿ ವಿದೇಶಿಯರೆಂಬ ಪ್ರಶ್ನೆ, ನಿರಕ್ಷರಿಗಳಲ್ಲಿ ಅಲ್ಪಭಾಷಿಕರಲ್ಲಿ, ಅಲ್ಪಮತೀಯರಲ್ಲಿ ತೀವ್ರಗೊಂಡು ಅಸಮಾಧಾನಕ್ಕೆ ದಾರಿ ಮಾಡಿಕೊಡುವುದರಲ್ಲಿ ಸಂಶಯವಿಲ್ಲ.

ಒಂದುಕಡೆ ಅಸ್ಸಾಮವನ್ನು ಕಡೆಗಣಿಸುವ ಕೇಂದ್ರದ ಆರ್ಥಿಕ-ರಾಜಕೀಯ ನೀತಿ, ಮತ್ತೊಂದು ಕಡೆ ಮಹಾಂತ ಸರಕಾರದ ಬೆಲೆಏರಿಕೆ ನೀತಿ, ಭಾಷೆ ನೀತಿ, ಮೂರನೆಯದಾಗಿ, ಒಪ್ಪಂದವನ್ನು ಜ್ಯಾರಿಗೊಳಿಸಬೇಕು, ವಿದೇಶೀಯರನ್ನು ಗುರ್ತಿಸಿ ಕೂಡಲೇ ಹೊರಗಟ್ಟಬೇಕೆಂಬ ಒತ್ತಾಯ, ಚಳುವಳಿಯ ಬೆದರಿಕೆ, ಅಸ್ಸಾಮಿನಲ್ಲಿ ಅಸಮಾಧಾನದ ಹೊಗೆಯಾಡಲು ಅವಕಾಶಮಾಡಿಕೊಟ್ಟಿದೆ.

ಇದರ ಜೊತೆಯಲ್ಲೇ ಮಹಾಂತ ಸರಕಾರ ಸಿ. ಪಿ. ಐ. (ಎಂ) ಮತ್ತು ಇತರಸಾಮೂಹಿಕ ಸಂಘಟನೆಗಳ ಮೇಲೆ ದಬ್ಬಾಳಿಕೆ ಮುಂದುವರಿಸಿದೆ. ಪ್ರಾರಂಭದಿಂದಲೂ ಅವರ ಚಳುವಳಿಯನ್ನೆದುರಿಸಿದ್ದು ಸಿ.ಪಿ ಐ. (ಎಂ). ಕೇಂದ್ರದೊಡನೆಯ ಅವರ ಒಪ್ಪಂದವನ್ನು ವಿರೋಧಿಸಿರುವುದು ಸಿ.ಪಿ.ಐ (ಎಂ). ಅವರನೀತಿ ವಿರುದ್ಧ ಬಲವಾಗಿ ಹೋರಾಡಿ ಪ್ರಾಣತ್ಯಾಗ ಮಾಡಿದವರು ಸಿ.ಪಿ ಐ. (ಎಂ), ಸಿ.ಐ.ಟಿ.ಯು., ಎಸ್.ಎಫ್.ಐ. ಸಂಘಟನೆಗಳು. ಈಗಲಾದರೂ ಕೇಂದ್ರ ಮತ್ತು ಮಹಾಂತ ಸರಕಾರದ ಆರ್ಥಿಕ ನೀತಿಯನ್ನು ಇತರ ಜನವಿರೋಧಿ ಕ್ರಮಗಳನ್ನೂ ಪ್ರತಿಭಟಿಸುವವರು ಅವರೇ. ಆದ್ದರಿಂದಲೇ ಮಹಾಂತ ಸರಕಾರದ ಪೂರ್ಣ ದಬ್ಬಾಳಿಕೆ ಈ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಮೇಲೆ ನಿರಂತರವಾಗಿ ನಡೆದಿದೆ.

ಆದ್ದರಿಂದ ಕೇಂದ್ರ ಸರಕಾರ ಅಸ್ಸಾಮಿನ ಮೇಲೆ ಹೆಚ್ಚು ಗಮನ ಹರಿಸಬೇಕು. ಕೂಡಲೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು, ಛಿದ್ರಕಾರಿ ಶಕ್ತಿಗಳನ್ನು ಸೋಲಿಸಲು ತೀವ್ರ ಕ್ರಮಕೈಗೊಳ್ಳಬೇಕು. ಛಿದ್ರಕಾರಿ ಶಕ್ತಿಗಳನ್ನು ಸೋಲಿಸಲು, ಅಸ್ಸಾಮಿನ ಸಮಸ್ಯೆಗಳ ಪರಿಹಾರಕ್ಕಾಗಿ ಸಿ.ಪಿ.ಐ. (ಎಂ) ಸತತವಾಗಿ ಹೋರಾಡುತ್ತಿದೆ. ವಿಚ್ಛಿದ್ರಕಾರಿ ಚಳುವಳಿ ಮತ್ತೊಮ್ಮೆ ತಲೆ ಎತ್ತದಂತೆ ಮಾಡುವುದು ಪ್ರತಿಯೊಬ್ಬನ ಕರ್ತವ್ಯ.

ಪ್ರಜಾಪ್ರಭುತ್ವ ಚಳುವಳಿಯಲ್ಲಿ ಕಾರ್ಮಿಕ ವರ್ಗ ಸೇರಿಕೊಳ್ಳಲಿ

ಬೆಲೆಯೇರಿಕೆ, ನಿರುದ್ಯೋಗ, ಗುತ್ತೆದಾರಿ ಬಂಡವಾಳದಾರರ ಹಿಡಿತ, ಬಡತನದ ನಿರ್ಮೂಲನೆಗಾಗಿ ದೇಶದಾದ್ಯಂತ ನಡೆಯುತ್ತಿರುವ ಚಳುವಳಿಯಲ್ಲಿ ಕಾರ್ಮಿಕ ವರ್ಗ ಸೇರಿಕೊಳ್ಳಬೇಕೆಂದು ವ್ಯಾಪಾರಿ ಮತ್ತು ಉದ್ಯೋಗ ನೌಕರದಾರರ ಅಖಿಲ ಭಾರತ ಮಹಾಸಭೆಯ ಪ್ರಧಾನ ಕಾರ್ಯದರ್ಶಿ ರಾಮಪಾದ ಚಕ್ರವರ್ತಿಯವರು ಇತ್ತೀಚಿಗೆ ಬೆಂಗಳೂರಿನಲ್ಲಿ ನೌಕರದಾರರ ಸಭೆಯಲ್ಲಿ ಕರೆ ನೀಡಿದರು. 1946 ರಲ್ಲಿ ಪ್ರಾರಂಭವಾದ ಉದ್ಯೋಗ ವ್ಯಾಪಾರಸ್ಥರ ಸಂಘಟನೆ ದೇಶಾದ್ಯಂತ ಬೆಳೆದು 26,000 ಸದಸ್ಯರನ್ನು ಹೊಂದಿದೆಂದು, ಎಲ್ಲಾ ರಾಜ್ಯಗಳಲ್ಲೂ ಅದನ್ನು ವಿಸ್ತರಿಸುವ ಪ್ರಯತ್ನ ನಡೆದಿದೆಂದೂ ಹೇಳಿದರು. ತಮ್ಮ ಆರ್ಥಿಕ ಬೇಡಿಕೆಗಳ ಜೊತೆಯಲ್ಲಿಯೇ ರಾಜಕೀಯ ತಿಳುವಳಿಕೆ ಪಡೆದು ತಮ್ಮ ಸುಲಿಗೆಯ ಮೂಲ ಕಂಡು ಹಿಡಿದು ಹೊಸ ಸಮಾಜ ನಿರ್ಮಾಣಕ್ಕೆ ನಡೆಯುತ್ತಿರುವ ಚಳುವಳಿಯಲ್ಲಿ ಸಮಭಾಗಿಗಳಾಗಿ ಹೋರಾಡ ಬೇಕೆಂದು ಕರೆನೀಡಿದರು.

ಸಿ. ಐ. ಟಿ. ಯು ಮುಂಖಡರಾದ ಎನ್. ಕೆ. ಉಪಾಧ್ಯಾಯ, ಬ್ಯಾಂಕ್ ಫೆಡರೇಶನ್ ಪರವಾಗಿ ಬಾಲಕೃಷ್ಣ ಶೆಟ್ಟಿ, ಯೂನಿಯನ್ನಿನ ಮುಖಂಡ ಕುಟ್ಟಿ ಮೊದಲಾದವರೂ ಭಾಷಣ ಮಾಡಿದರು. ಯೂನಿಯನ್ ಅಧ್ಯಕ್ಷ ಕೆ. ಎಸ್. ಸುಬ್ರಮಣಿ ಅವರು ಅಧ್ಯಕ್ಷತೆ ವಹಿಸಿದ್ದರು

ಆಲ್‌ಫ್ರೆಡ್ ಹರ್ಬರ್ಟ್ ನೌಕರದಾರರ ಹೋರಾಟ

ಬೆಂಗಳೂರು ಕೆ. ಆರ್. ಪುರದಲ್ಲಿಯ ಆಲ್‌ಫ್ರೆಡ್ ಹರ್ಬರ್ಟ್ (ಇಂಡಿಯಾ) ನೌಕರದಾರರು ಕಳೆದ 6–7 ತಿಂಗಳಿಂದಲೂ ತಮ್ಮ ಬೇಡಿಕೆಗಳಿಗಾಗಿ ಮಾತುಕತೆ ನಡೆಸುತ್ತಿದ್ದಾರೆ. ಉತ್ಪಾದನಾ ಬೋನಸ್ಸಿಗೆ ಕಾರ್ಮಿಕರು ಒಪ್ಪಿದರೆ ರೂ. 25/- ಹೆಚ್ಚು ಕೊಡುವುದಾಗಿ ಮಾಲಕನು ಸೂಚಿಸಿದ್ದನ್ನು ಯೂನಿಯನ್ ವಿರೋಧಿಸಿದೆ. ಮೂಲ ವೇತನ, ತುಟ್ಟಿಭತ್ತೆ ಹೆಚ್ಚಳ ಸಾಧ್ಯವಿಲ್ಲೆಂದು ಮಾಲಕ ವರ್ಗ ಹೇಳುತ್ತಿದೆ. ಜೂನ್ 13 ರಿಂದ 19 ರ ವರೆಗೆ ಧರಣಿ ಸತ್ಯಾಗ್ರಹ ನಡೆಸಲಾಯಿತು. ಅದರಲ್ಲಿ ಮಹಿಳಾ ಕಾರ್ಮಿಕರೂ ಪಾಲ್ಗೊಂಡಿದ್ದರು. ಕಾರ್ಮಿಕರು ಮುಷ್ಕರದ ಸಿದ್ಧತೆ ನಡೆಸಿದ್ದಾರೆ. ತಮ್ಮ ಹೋರಾಟಕ್ಕೆ ಎಲ್ಲ ಕಾರ್ಮಿಕ ಸಂಘಗಳ ಸಹಕಾರ ಬೇಡಿದ್ದಾರೆ.

ಕರ್ನಾಟಕ ಸಾಮಾಜಿಕ-ಆರ್ಥಿಕ ಪರಿಸ್ಥಿತಿ: ನಮ್ಮ ಶಿಕ್ಷಣ ಎತ್ತ ಸಾಗಿದೆ ?

—ಜಿ. ಎನ್. ನಾಗರಾಜ್

ಕರ್ನಾಟಕ ಬರದ ಬಸಿರೊಳಗಿಂದ ಇನ್ನೂ ಇದೀಗ ಹೊರಬರುತ್ತಿದೆ. ಮೂರುವರ್ಷಗಳ ದೀರ್ಘಕಾಲ, 16 ಜಿಲ್ಲೆಗಳ 19000ಕ್ಕೂ ಹೆಚ್ಚು ಹಳ್ಳಿಗಳಿಗೆ ವ್ಯಾಪಿಸಿದ್ದ ಅತಿ ಹಿಂದಿನ ಡೋಗಿ ಬರಗಳ ತೀವ್ರತೆಯನ್ನು ನೆನಪಿಸುವಂತಹ ಬರಗಾಲ ಇದು. ಊರಿಗೂರೆ ಖಾಲಿಯಾಗಿ ಸೊಲ್ಲಾಪುರ, ಪೂನಾ, ಮುಂಬಯಿ, ಮದ್ರಾಸ್, ಬೆಂಗಳೂರಿಗೆ ಕುಟುಂಬ ಸಮೇತ ಜನ ಗುಳೆ ಹೋಗಿದ್ದ ಲಕ್ಷಾಂತರ ಕೃಷಿ ಕಾರ್ಮಿಕರು ಸಣ್ಣ ರೈತರು ಇನ್ನೂ ಪೂರ್ಣ ಮರಳಿ ಬಂದಿಲ್ಲ. ಕೆಲವರು ಬರದೇ ಇರಲೂ ಬಹುದು. ಊರಿಗೂರೇ ಖಾಲಿಯಾದಾಗ ಊರ ಶಾಲೆ ಗತಿಯೇನು ? ಈ ಜನ ಅತಿಯಾಗಿ ನೆಚ್ಚಿರುವಸಾಂಬಶಿವನನ್ನೇ 'ನಿನಗುಡಿಗೆ ಬೆಂಕಿ ಹೊತ್ತಿಸ' ಎನ್ನುವವರಾದರೆ ಇನ್ನು ಶಾಲೆಯ ಬಗ್ಗೆ ಏನು ಹೇಳಬಹುದು ?

ಹೀಗೆ ಮೂರು ನಾಲ್ಕು ವರ್ಷಕ್ಕೊಮ್ಮೆ ವಿವಿಧ ಪ್ರಮಾಣದಲ್ಲಿ ಬರಕ್ಕೆತುತ್ತಾಗುತ್ತಲೇ ಇರುವ ಪ್ರದೇಶಗಳಲ್ಲಿ ಬರದ ಪ್ರಮಾಣಕ್ಕೆ ತಕ್ಕಂತೆ ಗುಳೇ ಹೋಗುವುದೂ ಸಾಮಾನ್ಯ. ಅಷ್ಟೇ ಅಲ್ಲ,ಬರಗಾಲ ಪೀಡಿತ ಪ್ರದೇಶಗಳಲ್ಲಿ ಪ್ರತಿವರ್ಷವೂ ಅವರ ವಾಸಸ್ಥಳದಲ್ಲಿ ಸುಗ್ಗಿಯ ಕೆಲಸಗಳೆಲ್ಲಾ ಮುಗಿದು ಕೂಲಿ ಸಿಗದಾಗ ನೆರೆಯ ನೀರಾವರಿ ಪ್ರದೇಶಗಳಲ್ಲೊಂದು ನಿಶ್ಚಿತವಾದ ಊರಿಗೆ ಪ್ರತಿವರ್ಷ ಹೋಗಿ ಕೆಲವು ವಾರಗಳು ಅಲ್ಲಿ ದುಡಿದು ಬರುವುದೂ ಉಂಟು.... ಈ ಎಲ್ಲಾಸಮಯದಲ್ಲಿ ನಮ್ಮ ಕಂಪಲ್ಸರಿ ಸಾರ್ವತ್ರಿಕ ಶಿಕ್ಷಣದ ಗತಿ ಏನು ?

ನಮ್ಮ ರಾಜ್ಯದಲ್ಲಿ ಅತ್ಯಂತಹೆಚ್ಚು ನಿರಕ್ಷರಿಗಳಿರುವ ಜಿಲ್ಲೆಗಳು ಕ್ರಮವಾಗಿ ರಾಯಚೂರು. ಗುಲ್ಬರ್ಗಾ, ಬೀದರ್, ಬಿಜಾಪುರ, ಕೋಲಾರ ತುಮಕೂರು ಎಂದರೆ ತಿಳಿಯುವುದಿಲ್ಲವೇ ? ನಮ್ಮ ರಾಜ್ಯದ ಅತ್ಯಂತ ಬರಪೀಡಿತ ಜಿಲ್ಲೆಗಳೂ ಇವೇ,ಬರಗಾಲಕ್ಕೂ ಶಿಕ್ಷಣಕ್ಕೂ ಬದ್ಧ ದ್ವೇಷ ಎಂಬುದು ಇದರಿಂದಲೇ ಸಾಬಿತಾಗುತ್ತದೆ.

ಶಾಲೆಗೆ ಹೋಗದವರು

ನಮ್ಮ ರಾಜ್ಯದ ಮಕ್ಕಳಲ್ಲಿ ಶಾಲೆಗೆ ಹೋಗುವ ವಯೋಮಾನವನ್ನು ತಲುಪುತ್ತಲೇ ಶಾಲೆಗೆ ಅವರನ್ನು ಸೇರಿಸಿಯೇ ತೀರಬೇಕೆಂಬ ಕಡ್ಡಾಯ ಶಿಕ್ಷಣ ಕಾನುನೇನೊ ಇದೆ. ಪ್ರಾಥಮಿಕ ಮೊದಲ ತರಗತಿಯಲ್ಲಿ ಶೇ. 85 ರ ನೊಂದಾವಣೆಯನ್ನು ಸರಕಾರದ ಎಲ್ಲ ದಾಖಲೆಗಳೂ ಹೇಳುತ್ತವೆ. ಬರಗಾಲ ನೆರೆಗಾಲದ ಬವಣೆಯಿಲ್ಲದಾಗ ಕೂಡ ಈ ಮಾತು ನಿಜವಿರಲು ಸಾಧ್ಯವಿಲ್ಲ ಎಂಬುದು ನಮ್ಮ ಎಲ್ಲಾ ಅನುಭವ ಹೇಳುತ್ತದೆ. ಸ್ವಾತಂತ್ರ್ಯ ಬಂದ 40 ವರ್ಷಗಳ ನಂತರವೂ ಕೇವಲ ಶೇ 4.8 ರಷ್ಟು ಅಕ್ಷರಸ್ಥ ಗ್ರಾಮೀಣ ಹೆಣ್ಣು ಮಕ್ಕಳನ್ನುಳ್ಳ ಗುಲ್ಬರ್ಗಾಜಿಲ್ಲೆ ಸಾಕ್ಷಿ. ಹೀಗೆಶಾಲೆಯ ಮುಖವನ್ನೇ ನೋಡದ ಎಷ್ಟೋ ಮಕ್ಕಳ ಹೆಸರು. ಶಾಲೆಯ ದಾಖಲೆಗಳಲ್ಲಿ ಮೆರೆಯುತ್ತ ಅತ್ತ ಕುರಿಕಾಯುವುದರಿಂದ ಎಮ್ಮೆ ದನ ಕಾಯುವುದಕ್ಕೆ, ಅಲ್ಲಿಂದ ಮುಂದೆ ಕಳೆಕಸ ತೆಗೆಯುವುದಕ್ಕೆ ಮುಂದೆ ಅಗೆತ ಉಳುಮೆ ಮಾಡುವುದಕ್ಕೆ ಕೇರ್ಗಡೆಯಾಗುತ್ತಿರುವಾಗಲೇ ಇಲ್ಲಿ ಶಾಲೆಯಲ್ಲಿ ತರಗತಿಯಿಂದ ತರಗತಿಗೆ ಕೇರ್ಗಡೆಯಾಗುತ್ತಲೇ ಇರುತ್ತಾನೆ. ಬರಗಾಲದಲ್ಲಿ ಊರೆಲ್ಲಾ ಖಾಲಿಯಾದರೂ ಊರ ಶಾಲೆಯ ಹಾಜರಿ ಪುಸ್ತಕ ತುಂಬಿಯೇ ಇರುವ ಅನೇಕ ಪ್ರಸಂಗಗಳಿವೆ ! ಬರಗಾಲದಲ್ಲಿ ಶಿಕ್ಷಣಕ್ಕಾದ ಹಾನಿಯೇನು? ಬರವಿಲ್ಲದಾಗಲೂ ಶಾಲೆಯನ್ನೇ ನೋಡದ ಮಕ್ಕಳೆಷ್ಟು ಎಂಬುದರ ನಿಜ ಚಿತ್ರ ಸರಕಾರಿ ಅಂಕೆ ಸಂಖ್ಯೆಗಳಲ್ಲಿಯೂ ಸಿಗುವುದಿಲ್ಲ. ಈ ಕೆಲಸವನ್ನು ನಮ್ಮ ವಿದ್ಯಾರ್ಥಿ ಸಂಘಟನೆಗಳು, ಶಿಕ್ಷಕರ, ರೈತರ ಸಂಘಟನೆಗಳು ಮಾತ್ರ ಮಾಡಬಹುದಾದ ಕೆಲಸ.

ಈಗ ಎಲ್ಲೆಲ್ಲೂ ಶಾಲಾ ಕಾಲೇಜುಗಳಿಗೆ ಸೇರುವ ಸೇರಿಸುವ ಗಡಿ ಬಿಡಿ. ಧಾವಂತ. ಪೋಷಕರಿಗೆ- ಮಕ್ಕಳಿಗೆ ಅಲೆದಾಟ ಕೆಲವರಿಗೆ ಈಗಾಗಲೇ ಮುಗಿದಿದೆ ಹಲವರಿಗೆ ಮುಗಿಯದ ಕಥೆ.

ಒಂದನೆಯ ತರಗತಿಗೆ ಪ್ರವೇಶ ಪಡೆಯುವುದಕ್ಕೂ ಐದು ಹತ್ತು ಸಾವಿರ ರೂ. ಗಳ ಡೊನೇಷನ್ ಎಂಬ ದರೋಡೆ. ಮಗು ಇನ್ನೂ ಹೊಟ್ಟೆಯಲ್ಲಿರುವಾಗಲೆ ಮುಂಗಡ ಬುಕಿಂಗ್....

ನಮ್ಮ ಶಿಕ್ಷಣ ಎತ್ತ ಸಾಗಿದೆ ?

ಶಾಲೆ ಬಿಟ್ಟವರು

ಶಾಲೆಗೆ ಅನೇಕ ಜನ ಗ್ರಾಮೀಣ, ನಗರಗಳ ಬಡವರ ಮಕ್ಕಳೂ ಸೇರಿರಬಹುದು ಅವರ ಪರಿಸ್ಥಿತಿ ಏನು ? ಲಭ್ಯವಿರುವ ಸರಕಾರಿ ಅಂಕಿ ಅಂಶಗಳತ್ತ ಕಣ್ಣು ಹಾಯಿಸಿದರೇ ಸಾಕು ಅನಕ್ಷರಸ್ಥ ಅಶಿಕ್ಷಿತ ಭಾರತದ ಬೃಹತ್‌ಚಿತ್ರ ಕಣ್ಣ ಮುಂದೆ ನಿಲ್ಲುತ್ತದೆ. ಪ್ರಾಥಮಿಕ ಒಂದನೇ ತರಗತಿ ಸೇರಿದ 100 ಜನರಲ್ಲಿ ಐದನೆಯ ತರಗತಿ ಸೇರುವವರು ಕೇವಲ 55 ಜನ, ಏಳನೇ ತರಗತಿ ದಾಟಿ ಪ್ರೌಢ ಶಾಲೆಯನ್ನು ಮುಟ್ಟುವವರು ಕೇವಲ 28 ಜನ. ಇನ್ನುಳಿದ 17 ಜನರೂ ಮಧ್ಯೆಮಧ್ಯೆ ಬಿಟ್ಟು ಹೋಗುತ್ತಾರೆ. ಶಾಲೆಗೆ ಬಂದು ಕೇವಲ ಕೆಲವೇ ವಾರ, ತಿಂಗಳು ಮಾತ್ರ ಇದ್ದು ಶಾಲೆಗೆ ಬರದಂತಾಗುವವರೇ ಇದರಲ್ಲಿ ಬಹಳ ಜನ. ತಂದೆ ತಾಯಿಗಳಿಬ್ಬರೂ ಕೆಲವೊಮ್ಮೆ ಅಣ್ಣ ಅಕ್ಕಂದಿರು ಎಲ್ಲಾ ಹೋಗಿ ಹಳ್ಳಿಯ ಗೌಡ ಪಾಟೀಲರ ಹೊಲದಲ್ಲಿ ಅಥವಾ ನಗರಗಳಲ್ಲಿಕಟ್ಟಡ, ರಸ್ತೆಗಳ ನಿರ್ಮಾಣ, ಅಗರಬತ್ತಿ,ಬೀಡಿ ಹೋಟೆಲ್ ಮತ್ತಿತರ ಉದ್ಯಮಗಳಲ್ಲಿ ದಿನವೆಲ್ಲಾ ದುಡಿದರೂ ಸಾಲದೆ -ಆ ಮಗುವೇ ತನ್ನ ಹೊಟ್ಟೆ ತಾನು ಹೊರೆಯಬೇಕಾಗುತ್ತದೆ. ಶಾಲೆ ಬಿಡುವುದು ಅನಿವಾರ್ಯವಾಗುತ್ತದೆ. ಕವಿ ಹೊಸದಾಗಿ ಹಾಡಬೇಕಾಗುತ್ತದೆ.

ಹಳ್ಳಿಗಾಡ ಹಸುಗೂಸೇ
ಹಸುಕಾಯೋ ಧೀರಬಾಲನೆ
ಶಾಲೆ ಮರೆತು ದಿನವೆಷ್ಟಾಯಿತೋ

ಬಾಲಕಾರ್ಮಿಕರ ಬವಣೆ ಇದಾದರೆ ಪ್ರಾಥಮಿಕ ಹಂತವನ್ನು ದಾಟಿದ 28 ಬಾಲಕರಲ್ಲಿ ಎಸ್. ಎಸ್. ಎಲ್. ಸಿ. ದಾಟುವವರು ಕೇವಲ 15 ಮಂದಿ. ನೂರಕ್ಕೆ 15 ಮಂದಿ ಮಾತ್ರ ಎಸ್ ಎಸ್. ಎಲ್.ಸಿ. ಪಾಸಾದವರು ಎಂದರೂ ಅವರಿಗೇ ಉದ್ಯೋಗ ದೊರೆಯದ, ಇನ್ನೂ ಕಡಿಮೆ ಸಂಖ್ಯೆಯ ಡಿಗ್ರಿ ಪಡೆದವರಿಗೇ ಉದ್ಯೋಗಕೊಡಲಾರದ ಸರಕಾರಗಳ ಇಷ್ಟು ಅಲ್ಪ ಶಿಕ್ಷಣದ ಕತ್ತನ್ನು ಹಿಸುಕಿ ಉಸಿರುಗಟ್ಟಿಸಿ ಕೊಲ್ಲುವ ನೂತನ ಶಿಕ್ಷಣ ನೀತಿಯನ್ನು ನಮ್ಮ ಆಳುವ ವರ್ಗಗಳು ತರುವುದರಲ್ಲೇನಾಶ್ಚರ್ಯ. ಅದನ್ನು ನಮ್ಮ ರಾಜ್ಯ ಶಿಕ್ಷಣ ಮಂತ್ರಿ ರಘುಪತಿಯವರು (ಅವರ ಪಕ್ಷ, ಪಕ್ಷದ ನಾಯಕರು ಈ ಶಿಕ್ಷಣ ನೀತಿಯನ್ನು ಟೀಕೆ ಮಾಡಿದ್ದರೂ) ಉತ್ಸಾಹದಿಂದ ಸ್ವಾಗತಿಸುವುದರಲ್ಲೇನಾಶ್ಚರ್ಯ.

ಶಿಕ್ಷಣದ ಖಾಸಗೀಕರಣ

ಇಲ್ಲಿಯ ವರೆಗೂ ನಾವುನೋಡಿದ್ದು ಸರಕಾರಿ ಶಾಲೆಗಳೇ ಹೆಚ್ಚಿರುವ ಪ್ರಾಥಮಿಕ ಶಿಕ್ಷಣದಲ್ಲಿ-ಅದರಲ್ಲಿಯೂ ಹಳ್ಳಿಗಾಡಿನಲ್ಲಿ ಬಡತನ ಮತ್ತು ಶಿಕ್ಷಣದ ಸಂಬಂಧದ ಬಗ್ಗೆ. ಇನ್ನು ಶಿಕ್ಷಣವನ್ನೇ ವ್ಯಾಪಾರ ಮಾಡಿಕೊಂಡಿರುವ ಅಪಾರ ಲಾಭ ಗಳಿಸುವುದಕ್ಕಾಗಿಯೇ ಇರುವ ಖಾಸಗಿ ಶಾಲೆಗಳ ಬಗ್ಗೆ ಏನು ಹೇಳಬಹುದು ?

(ಕೊನೆಯ ಪುಟಕ್ಕೆ)

ಪಠ್ಯ ಪುಸ್ತಕದ ಅವಾಂತರ

ಜೂನ್ ಒಂದರಂದು ಕರ್ನಾಟಕ ರಾಜ್ಯಾದ್ಯಂತ ಪ್ರಾಥಮಿಕ ಶಾಲೆಗಳು ಪ್ರಾರಂಭವಾಗಿವೆ ಕಲಿಯುವ ಆತುರದಿಂದ ಮುದ್ದು ಮಕ್ಕಳು ಅತ್ಯುತ್ಸಾಹದಿಂದ ಹೊಸ ಸಮವಸ್ತ್ರ ಧರಿಸಿ ಶಾಲೆಗಳಲ್ಲಿ ಗುರುಗಳಿಂದ ಪ್ರಥಮ ಪಾಠ ಕೇಳಿಸಿಕೊಳ್ಳುವ ಆತುರದಲ್ಲಿದ್ದಾರೆ. ಆದರೆ ಪಠ್ಯ ಪುಸ್ತಕ ಅವರ ಕೈಸೇರಿಲ್ಲ. ಓದುವ ಅವಕಾಶವಿಲ್ಲ. ಕೇಳಿಸಿಕೊಳ್ಳುವುದರಲ್ಲೇ ಸಮಧಾನ. ಕೆಲವು ದಿವಸಗಳ ನಂತರ ಕೆಲವರಿಗೆ ಪುಸ್ತಕ ಲಭ್ಯ ಅವರಿಗೆ ಆನಂದ ಉಳಿದವರಿಗೆ ನಿರಾಶೆ.

ಶಾಲೆ ಪ್ರಾರಂಭವಾದ 22 ದಿವಸಗಳ ನಂತರ ಕರ್ನಾಟಕ ರಾಜ್ಯದ ಶಿಕ್ಷಣ ಮಂತ್ರಿ ಎಂ. ರಘುಪತಿಯವರಿಂದ ಪತ್ರಿಕಾ ಹೇಳಿಕೆ: "ರಾಜ್ಯದ ಪ್ರಾಥಮಿಕ ಮತ್ತು ಹೈಸ್ಕೂಲ್ ಮಕ್ಕಳಿಗೆ 3,68,84000 ಪಾಠ ಪುಸ್ತಕಗಳು ಬೇಕು. ಅದರ ಪೈಕಿ 3,36,70,000 ಪ್ರತಿ ಪ್ರಿಂಟಾಗಿದೆ. ಅದರಲ್ಲಿ ಮೂರು ಕೋಟಿ ಶಾಲೆಗಳಿಗೆ ರವಾನೆಯಾಗಿದೆ. ಇನ್ನೂ ಬೇಕಾಗಿರುವ 16 ಲಕ್ಷ ಪ್ರತಿ ಪ್ರಿಂಟಾಗಬೇಕಾಗಿದೆ. ಅವು ರವಾನೆಯಾಗಬೇಕು ಮರಾಠಿ, ಉರ್ದು, ಹಿಂದಿ, ಪುಸ್ತಕಗಳು ಪ್ರಿಂಟಾಗಬೇಕಾಗಿದೆ. ತಿಂಗಳ ಕೊನೆಯೊಳಗೆ ಅವುಗಳ ಪ್ರಿಂಟಿಂಗ್ ಮುಗಿಯಬಹುದು.

"ವಿದ್ಯುಚ್ಛಕ್ತಿ ಮತ್ತು ಪೇಪರಿನ ಅಭಾವವನ್ನು ಪ್ರಿಂಟಿಂಗ್ ಪ್ರೆಸ್ಸುಗಳು ಎದುರಿಸಬೇಕಾಯಿತು. ಹೋದ ವರ್ಷ ಆಗಸ್ಟ್ ಕೊನೆಯವರೆಗೂ ಪುಸ್ತಕಗಳ ವಿತರಣೆಯಾಗಿತ್ತು. ಈ ರೀತಿ ತಡವಾಗುವುದನ್ನು ಮುಂದಿನ ಸಲ ಕಡಿಮೆ ಮಾಡಲಾಗುವುದು."

"ಬೆಂಗಳೂರು ಜಿಲ್ಲೆಯಲ್ಲಿ ಶೇ 50. ರಷ್ಟು ಶಾಲೆಗಳಿಗೆ ಪುಸ್ತಕ ವಿತರಣೆಯಾಗಿದೆ. ಜಿಲ್ಲೆಗಳಲ್ಲಿ ಶೇ 75 ರಷ್ಟಾಗಿದೆ. ಹೈಸ್ಕೂಲ್‌ಗಳಿಗೆ ಪುಸ್ತಕ ವಿತರಣೆಗು ಕೆಲಸ ಶೀಘ್ರ ಪ್ರಾರಂಭವಾಗುತ್ತದೆ ಬೆಂಗಳೂರು ನಗರದಲ್ಲಿ 360 ಶಾಲೆಗಳ ಪೈಕಿ 160 ಶಾಲೆಗಳು ಪುಸ್ತಕ ಕೊಂಡಿವೆ".

ಇದು ಶಿಕ್ಷಣ ಮಂತ್ರಿಗಳ ಹೇಳಿಕೆ.

ಹೋದ ವರ್ಷ ಪರೀಕ್ಷೆ ಮುಗಿಯುವ ತನಕ ಪ್ರಾಥಮಿಕ ಶಾಲೆಯಿಂದ ಹಿಡಿದು ಡಿಗ್ರಿ ಕೋರ್ಸಿನವರೆಗೆ ಮಕ್ಕಳಿಗೆ ಒಂದಲ್ಲೊಂದು ಪಠ್ಯ ಪುಸ್ತಕ ಲಭಿಸಲಿಲ್ಲ. ಗೈಡ್ ಮತ್ತು ಶಿಕ್ಷಕರ "ನೋಟ"ನ್ನವಲಂಬಿಸಿ ಪರಿಕ್ಷೆಯನ್ನೆದುರಿಸಬೇಕಾಗಿತು. ಕಳೆದ ಕೆಲವು ವರ್ಷಗಳಿಂದಲೂ ಅಂಥ ಸಂದಿಗ್ಧ ಪರಿಸ್ಥಿತಿ ವಿದ್ಯಾರ್ಥಿಗಳನ್ನೆದುರಿಸುತ್ತ ಬಂದಿತ್ತು.

ಜನತಾ ಸರಕಾರವಾದರೂ ಆ ಸಮಸ್ಯೆಯನ್ನು ಬಗೆಹರಿಸೀತು ಎಂಬ ಕನಸು ನನಸಾಗುತ್ತಿಲ್ಲ. ಈ ಬಂಡವಾಳಶಾಹಿ ಸಮಾಜದಲ್ಲಿವಿ ದ್ಯುಚ್ಛಕ್ತಿ ಪೇಪರಿನ ಕೊರತೆ, ನಿರಂತರವೂ ಇದ್ದೇ ಇರುತ್ತದೆ ಎಂಬ ಸಂಗತಿ ಶಿಕ್ಷಣ ಮಂತ್ರಿಯವರಿಗೆ ಗೊತ್ತಿರಬೇಕು. ಅದಕ್ಕೆ ಉಪಾಯ ಕಂಡುಹಿಡಿಯುವ ಪ್ರಯತ್ನವನ್ನು ಮಾತ್ರ ಅವರು ಮಾಡಲಿಲ್ಲ. ಮುಂದೆ ಕೂಡ ಮಾಡುವ ಸಾಧ್ಯತೆಯಿಲ್ಲ. ಕಳೆದ ಲಾಲ್ಕು ವರ್ಷಗಳಲ್ಲಿ ಇಬ್ಬರು ಶಿಕ್ಷಣ ಮಂತ್ರಿಗಳಾದರು. ರಘುಪತಿಯವರ ಕುರ್ಚಿ ಕೂಡ ಭದ್ರವಾಗಿಲ್ಲ.

ಹಿಂದಿನ ಕಾಲದಲ್ಲಿ ಕೆಲವು ವರ್ಷಗಳ ತನಕ ಪಠ್ಯ ಪುಸ್ತಕಗಳನ್ನು ಬದಲಾಯಿಸುವ ಅಭ್ಯಾಸ ಸರಕಾರಕ್ಕಿರುತ್ತಿರಲಿಲ್ಲ. ಒಮ್ಮೆ ಕೊಂಡ ಪುಸ್ತಕವನ್ನು ಆ ಮಗುವಿನ ತಮ್ಮ-ತಂಗಿಯರೂ ಉಪಯೋಗಿಸುತ್ತಿದ್ದರು. ಪುಸ್ತಕ ಪೂರ್ಣ ಹರಿದಾಗ ಮಾತ್ರ ಹೊಸ ಪುಸ್ತಕದ ಕರೀದಿ. ಆಗ ಪಠ್ಯ ಪುಸ್ತಕಗಳ ಬದಲಾವಣೆಯ ಪ್ರಮೇಯವಿರುತ್ತಿರಲಿಲ್ಲ.

ಶಿಕ್ಷಣವನ್ನೇ ಮಾರಾಟ ಮಾಡುವ ಈ ಕಾಲದಲ್ಲಿ ಪ್ರತಿ ವರ್ಷ ಹೊಸಬರ ಹೊಸ ಪಠ್ಯಪುಸ್ತಕ ಶಿಫಾರಸ್ ಮಾಡಲಾಗುತ್ತಿದೆ. ತಮಗೆ ಬೇಕಾದವರ ಬರಹಗಳನ್ನು ಪಠ್ಯಪುಸ್ತಕವಾಗಿ ಸ್ವೀಕರಿಸಿ ಮಕ್ಕಳ ಮೇಲೆ ಹೇರಿ, ಪಾಲಕರ ಕಿಸೆ ಕತ್ತರಿಸಲಾಗುತ್ತಿದೆ. ಅದು ಬಹಳ ಅನ್ಯಾಯ.

ಅದರ ಜೋತೆಯಲ್ಲಿ ಹಳೆ ಪುಸ್ತಕ ಕೊಂಡು ಕೊಡಲಿಕ್ಕೂ ಸಾಧ್ಯವಿಲ್ಲ. ಸರಕಾರವೂ ಹೊಸ ಪುಸ್ತಕಗಳನ್ನು ಒದಗಿಸುತ್ತಿಲ್ಲ. ಇಂಥ ಗಂಭೀರ ಪರಿಸ್ಥಿತಿ ಮಕ್ಕಳನ್ನು ಎದುರಿಸುತ್ತಿದೆ.


ರಘುಪತಿಯವರ ಹೇಳಿಕೆ ಪಾಲಕರನ್ನಾಗಲಿ, ಮಕ್ಕಳನ್ನಾಗಲೀ ಸಮಾಧಾನಗೊಳಿಸಲಾರದು. ಸಿ. ಪಿ. ಐ. (ಎಂ) ಮುಖಡತ್ವದಲ್ಲಿರುವ ಎಡರಂಗ ಸರಕಾರಗಳಿರುವ ಪಶ್ಚಿಮ ಬಂಗಾಲ, ತ್ರಿಪುರಾಗಳು ಸಕಾಲದಲ್ಲಿ ಮಕ್ಕಳಿಗೆ ಪಠ್ಯ ಪುಸ್ತಕಗಳನ್ನೊದಗಿಸುತ್ತಿರುವಾಗನಮ್ಮ ರಾಜ್ಯದ ಜನತಾ ಸರಕಾರ ಈ ಮಹತ್ವದ ರಂಗದಲ್ಲಿ ತನ್ನ ಕಾರ್ಯ ವೈಫಲ್ಯತೆಯನ್ನು ಪ್ರದರ್ಶಿಸುತ್ತಿದೆ.

ಸಂವಿಧಾನದ ಪ್ರಕಾರ ಮಕ್ಕಳಿಗೆ ಕಡ್ಡಾಯವಾಗಿ ಪುಕ್ಕಟೆ ಶಿಕ್ಷಣ ಕೊಡಬೇಕೆಂದು ಹೇಳುವುದು ಒಂದುಕಡೆ. ಪಠ್ಯ ಪುಸ್ತಕಗಳನ್ನು ಸಕಾಲದಲ್ಲಿ ಒದಗಿಸದಿರುವುದು ಮತ್ತೊಂದು ಕಡೆ. ಅದು ಅತ್ಯಂತ ಖಂಡನೀಯ.

○

ಕರ್ನಾಟಕದಲ್ಲಿ ಕಾಂ|| ಪಿ. ಸುಂದರಯ್ಯನವರ ಕೆಲವು ನೆನಪುಗಳು

—ಪಿ. ರಾಮಚಂದ್ರರಾವ್



ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ 12 ವರ್ಷಗಳ ಕೆಲಸ ಮಾಡಿದ, ದಕ್ಷಿಣ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಮೊದಲ ನೇತಾರರಲ್ಲೊಬ್ಬರಾದ ಕಾಂ. ಪಿ. ಸುಂದರಯ್ಯನವರು ಮೇ 19, 1985 ರಂದು ನಿಧನರಾದರು. "ಐಕ್ಯರಂಗ" ಇವರ ಮರಣದ ವಾರ್ಷಿಕಾಚರಣೆಯನ್ನು ತಡವಾಗಿಯಾದರೂ ಈ ಲೇಖನಗಳ ಮೂಲಕ ಮಾಡುತ್ತಿದೆ.

ಕಾಂ. ಪಿ. ಸುಂದರಯ್ಯನವರು ಭಾರತದ ಎಲ್ಲಾ ರಾಜ್ಯಗಳಲ್ಲೂ ಅಚ್ಚಳಿಯದ ಹೆಜ್ಜೆ ಗುರುತುಗಳನ್ನು ಬಿಟ್ಟು ಅಗಲಿದ್ದಾರೆ ಕಾಂ. ಬಿ. ಟಿ. ಆರ್. ಸುಂದರಯ್ಯನವರು ಮೃತಪಟ್ಟ ಸಂದರ್ಭದಲ್ಲಿ ಹೇಳಿದ ಮಾತು ನೂರಕ್ಕೆ ನೂರು ಸತ್ಯ. ಕಾಂ. ಎ. ಕೆ. ಗೋಪಾಲನ್ ಮತ್ತು ಕಾ. ಪಿ. ಸುಂದರಯ್ಯನವರು ನಮ್ಮ ದೇಶದ ಕಮ್ಯುನಿಸ್ಟ್ ಚಳವಳಿಯ ಜನಪ್ರಿಯ ಪ್ರಚಾರಕರು. ಕರ್ನಾಟಕದ ಕಮ್ಯುನಿಸ್ಟ್ ಚಳವಳಿಯ ವಿಸ್ತರಣೆ ಮತ್ತು ಮುನ್ನಡೆಗೆ ಕಾಂ. ಸುಂದರಯ್ಯನವರ ಕೊಡುಗೆ ಸಣ್ಣದೇನಲ್ಲ. ಅವರು ಯಾವ ರೀತಿಯಲ್ಲಿ ಈ ಕೆಲಸಕ್ಕೆ ಸಹಾಯಕರಾದರು ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ಇಲ್ಲಿ ನಾನು ನನ್ನ ನೆನಪಿನಿಂದ ಮರುಕಳಿಸಲು ಪ್ರಯತ್ನಿಸುತ್ತಿದ್ದೇನೆ.

ನಾನು ಆಗ ದ. ಜಿಲ್ಲೆಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿದ್ದೆ. ನಮ್ಮ ರಾಜ್ಯ ಸಮಿತಿಯಿಂದ ಕರೆಬಂತು. "ಕರ್ನಾಟಕರಾಜ್ಯದಲ್ಲಿ (ಸಂಯುಕ್ತ) ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸಭೆ ಬೆಂಗಳೂರಿನಲ್ಲಿ ಸೇರಲಿದೆ. ಗಟ್ಟಿಮುಟ್ಟಿನ ಇಂಗ್ಲಿಷ್ ಬಲ್ಲ ಕೆಲವು ಸ್ವಯಂಸೇವಕರನ್ನು ಕಳುಹಿಸಿಕೊಡಬೇಕು" ಎಂದು ಕೂಡಲೇ ನಾವು ನಿರ್ದೇಶನದ ಪ್ರಕಾರ ಸ್ವಯಂಸೇವಕರನ್ನು ಆ ಸಭೆಗೆ ಕಳುಹಿಸಿ ಕೊಟ್ಟೆವು. ಅವರು ಹಿಂದೆ ಬಂದವರು. ಪ್ರತಿಯೊಬ್ಬರೂ ಕಾಂ. ಸುಂದರಯ್ಯನವರ "ಸೂಕ್ಷ್ಮಾತಿಸೂಕ್ಷ್ಮ ಸಂಘಟನಾ ವಿಷಯಗಳ ಕುರಿತು ಆಸಕ್ತಿವಹಿಸಿ" ಸುಸೂತ್ರವಾಗಿ ಸಭೆ ಮತ್ತು ಸಭೆಯ ವ್ಯವಸ್ಥೆ ಕೇಂದ್ರ ಸಮಿತಿ ಸದಸ್ಯರ ವಸತಿ, ಆಹಾರ ಮತ್ತು ಸ್ನಾನ ಇತ್ಯಾದಿ ವ್ಯವಸ್ಥೆ ನಡೆಯುವಂತೆ ಮಾಡುತ್ತಿದ್ದರು ಎಂದು ವರದಿ ಕೊಟ್ಟಿದ್ದರು. "ರಾತ್ರಿ ನಮಗೆ ಸ್ವಯಂಸೇವಕರಾಗಿ "ಗಾರ್ಡ್ಸ್" ಕೆಲಸ ಮಾಡುವಾಗ ನಿದ್ರೆ ಬರುತ್ತಿದ್ದ ಸಂದರ್ಭಗಳಿದ್ದರೂ, ಕಾಂ. ಸುಂದರಯ್ಯನವರು ಸತತವಾಗಿ ಎಚ್ಚರಿಕೆಯಿಡುತ್ತಿದ್ದರು." "ಅಡುಗೆ ಕಾಲಕಾಲಕ್ಕೆ ತಯಾರಾಗಿ ಸಭೆಗೆ ಯಾವ ರೀತಿಯಲ್ಲೂ ತೊಂದರೆಯಾಗದಂತೆ ಅವರು ಎಚ್ಚರಿಕೆ ವಹಿಸುತ್ತಿದ್ದರು." ಬಳಲಿದ ಸ್ವಯಂಸೇವಕರಬಳಿ ಬಂದು, ತಾನೂ ಕುಳಿತು ಆ ಮಾತು ಈ ಮಾತು ಹೇಳಿ ಬಳಲಿಕೆಯನ್ನು ಹೋಗಲಾಡಿಸಿ "ಈ ಸ್ವಯಂಸೇವಕ ಕೆಲಸವು ಹೇಗೆ ಕ್ರಾಂತಿಕಾರಿ ಚಳವಳಿಯಲ್ಲಿ ಎಷ್ಟು ಪ್ರಾಮುಖ್ಯ" ಎಂಬುದನ್ನು ಒತ್ತಿ ಹೇಳುತ್ತಿದ್ದರು. 1968 ರಲ್ಲಿ ಭಾರತ ಮಾರ್ಕ್ಸ್‌ವಾದ ಕಮ್ಯುನಿಸ್ಟ್ ಪಕ್ಷವು ಅಂಗೀಕರಿಸಿದ "ಪಕ್ಷದ ಸಂಘಟನಾ ಠರಾವಿ"ನಲ್ಲಿ ಒಂದೆಡೆ "ಪ್ರತಿಯೊಬ್ಬ ಸದಸ್ಯನೂ ದೈಹಿಕವಾಗಿಯೂ, ಭೌದ್ಧಿಕವಾಗಿಯೂ ಕ್ರಾಂತಿಗೆ ತನ್ನನ್ನು ತಾನು ಸಜ್ಜುಗೊಳಿಸಬೇಕು' ಎಂಬ ವಾಕ್ಯವೊಂದಿದೆ ಅಗ ನಮ್ಮ ಕಾಂ. ಸುಂದರಯ್ಯನವರೇ ಠರಾವಿನಲ್ಲಿ ಸೇರಿಸಿರಬೇಕು ಎಂದು ಕಾಣುತ್ತದೆ.

197‍ರಲ್ಲಿ ಒಂದು ರಾಜ್ಯ ಸಮಿತಿ ಸಭೆ ಮಂಗಳೂರಿನಲ್ಲಿ ಜರುಗಿತು. ಆ ಸಭೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಸುಂದರಯ್ಯನವರು ಬಂದಿದ್ದರು. ಆ ಸಂದರ್ಭವನ್ನು ಉಪಯೋಗಿಸಿ ನಾನು ಜಿಲ್ಲೆಯ ಮೂಲೆಮೂಲೆಗಳಿಂದ ಪಕ್ಷದ ಸದಸ್ಯರನ್ನು ಮಂಗಳೂರಿಗೆ ಆಮಂತ್ರಿಸಿ ಸರ್ವ ಸದಸ್ಯರ ಸಭೆಯನ್ನು ಕರೆದೆ. ಕಾಂ. ಪಿ. ಸುಂದರಯ್ಯನವರನ್ನು ಈ ಸಭೆಯನ್ನು ಉದ್ದೇಶಿಸಿ ಮಾತನಾಡಲು ವಿನಂತಿಸಿಕೊಂಡೆ. ಆ ಸಭೆಯಲ್ಲಿ ಕಾಂ. ಸುಂದರಯ್ಯನರು ಪಕ್ಷದ ಸದಸ್ಯರಿಗೆ 'ಸಂಘಟನೆ'ಯ ಬಗ್ಗೆ, 'ಉಕ್ಕಿನ ಶಿಸ್ತಿನ' ಬಗ್ಗೆ 'ಕ್ರಾಂತಿಕಾರಿ ಮನೋಭಾವವನ್ನು ಬೆಳೆಸುವ ಅವಶ್ಯಕತೆ'ಯ ಬಗ್ಗೆ ಮಾತಾಡಿದ ಮಾತುಗಳು ಇಂದಿಗೂ ನನ್ನ ಕಿವಿಗಳಲ್ಲಿ "ಗುಂಯ್‌ಗುಟ್ಟುತ್ತಿವೆ" ಎಂದರೆ ಏನೂ ಅತಿಶಯೋಕ್ತಿ ಇಲ್ಲ. "ಸಂಗಾತಿಗಳೇ", ಎಂದು ಕಾಂ. ಪಿ. ಸುಂದರಯ್ಯನವರು ಪಕ್ಷದ ಸದಸ್ಯರನ್ನು ಸಂಭೋಧಿಸಿದಾಗ ಸಭೆಯಲ್ಲಿ ರೋಮಾಂಚನವಾಯಿತು. "ಭಾರತವು ಕ್ರಾಂತಿಯ ಹೊಸ್ತಿಲಲ್ಲಿ ನಿಂತಿದೆ. ಪರಿಸ್ಥಿತಿ ಪರಿಪಕ್ವವಾಗಿದೆ. ಇದನ್ನು ತಿಳಿದೆ ಕೇಂದ್ರ ಸರಕಾರವು ಇಂದಿರಾಗಾಂಧಿ ನೇತೃತ್ವದಲ್ಲಿ ನಮ್ಮ ಪಕ್ಷವನ್ನು ಒಂದನೆ ವೈರಿಯಾಗಿ ಪರಿಗಣಿಸಿ ಪಶ್ಚಿಮ ಬಂಗಾಲದಲ್ಲಿ ನಮ್ಮ ಚಳುವಳಿಯನ್ನೂ ತಲೆಯನ್ನೂ ಕಡಿಯಲು ಆರಂಭಿಸಿದೆ. ಈಗಾಗಲೇ 600 ಕ್ಕೂ ಅಧಿಕ ಸಂಖ್ಯೆಯಲ್ಲಿ ನಮ್ಮ ನೇತೃತ್ವ ಪಡೆದ ಕಾರ್ಯಕರ್ತರನ್ನು ಕೊಲ್ಲಲಾಗಿದೆ. ಇದು ಗಂಭೀರವಾದ ಪರಿಸ್ಥಿತಿ. ಇದನ್ನು ಸರಿಯಾದ ರೀತಿಯಲ್ಲಿ ದೃಢವಾಗಿ ಎದುರಿಸುವಲ್ಲಿ ನಾವು ಸಮರ್ಥರಾದರೆ ನಮ್ಮ ಮುನ್ನಡೆಯನ್ನು ಮುಂದಕ್ಕೆ ಯಾರಿಗೂ ತಡೆಗಟ್ಟಲು ಸಾಧ್ಯವಾಗುವುದಿಲ್ಲ. ಈ ಸವಾಲನ್ನು ನಮಗೆ ಎದುರಿಸಲು ಸಾಧ್ಯವೇ ? ದೇಶಾದ್ಯಂತವಾಗಿ ಸಂಗಾತಿಗಳು ಇಂದು ಹಿಂದೆಂದಿಗಿಂತಲೂ ತೀವ್ರವಾಗಿ ಕೆಲಸಮಾಡಿ ಸಂಘಟಿತವಾದ ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಕಟ್ಟಲು ಸಾಧ್ಯವಾದರೆ ಮಾತ್ರ ಈ ವೈರಿಗಳ ಸವಾಲನ್ನು ಎದುರಿಸಲು ಸಾಧ್ಯ. ಕರ್ನಾಟಕದ ಪಕ್ಷವೂ ಇದರಲ್ಲಿ ಒಂದು ಗಣನೀಯ ಪಾತ್ರವಹಿಸಬೇಕಾಗಿದೆ. ಅದನ್ನು ನೀವು ಖಂಡಿತವಾಗಿಯೂ ವಹಿಸುವಿರಿ ಎಂಬ ವಿಶ್ವಾಸ ನನಗಿದೆ" ಆ ಸಭೆಗೆ ಹಾಜರಾಗಿದ್ದ ಎಲ್ಲಾ ಸದಸ್ಯರಲ್ಲಿಯೂ ಕಾಂ. ಪಿ. ಸುಂದರಯ್ಯನವರ ಈ ಭಾಷಣವು "ಕ್ರಾಂತಿಕಾರಿ ಸ್ಫೂರ್ತಿ" ಯನ್ನು ತುಂಬಿತು ಎಂಬುದರಲ್ಲಿ ಎರಡು ಮಾತಿಲ್ಲ.

ಆ ಸಂದರ್ಭದಲ್ಲಿ ನನಗೆ ಕಾಂ. ಪಿ. ಸುಂದರಯ್ಯನವರನ್ನು ಅತ್ಯಂತ ಸಮೀಪದಿಂದ ವೀಕ್ಷಿಸಿದ ಅವಕಾಶ ಒದಗಿತ್ತು. ಅವರು ಖಾದಿಪ್ಯಾಂಟ್ ಮತ್ತು ಬಿಳೀ ಖಾದಿ ಜುಬ್ಬವನ್ನು ಧರಿಸಿದ ಸರಳ ವ್ಯಕ್ತಿ. ಚಿಕ್ಕ ಪ್ಯಾಕೆಟ್ ರೇಡಿಯೊದ ಮೂಲಕ ಕಾಲಕಾಲಕ್ಕೆ ಸುದ್ದಿಗಳನ್ನು ಅವರು ಕೇಳುತ್ತಿದ್ದರು. ಬೆಳಿಗ್ಗೆ ದಿನಪತ್ರಿಕೆಗಳನ್ನು ತರಿಸಿ ಓದಿ ತಿಳಿದುಕೊಳ್ಳುತ್ತಿದ್ದರು. ಸಮಿತಿ ಸಭೆಗೆ ಸಕಾಲದಲ್ಲಿ ಹಾಜರಾಗುತ್ತಿದ್ದರು. ಸಭೆಗೆ ತಯಾರಿ ಮಾಡಿಯೆ ಬರುತ್ತಿದ್ದರು. ಕ್ರಾಂತಿಕಾರಿ ನಿಷ್ಠುರತೆಯಿಂದ ಸಭೆಯಲ್ಲಿ ಪ್ರಶ್ನೆಗಳನ್ನೆತ್ತಿ ಅಭಿಪ್ರಾಯಗಳನ್ನು ಕೊಡುತ್ತಿದ್ದರು ಅದೇ ವೇಳೆ ಸಂಗಾತಿಗಳ ಜತೆ ಅತ್ಯಂತ ಸೌಹಾರ್ದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು.

ಕಾಂ. ಪಿ. ಸುಂದರಯ್ಯನವರು ಕರ್ನಾಟಕಕ್ಕೆ ಬಂದಾಗಲೆಲ್ಲಾ ರಾಜ್ಯದ ಭೌಗೋಲಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಒಂದು ನೆನಪು ದ. ಕ. ಜಿಲ್ಲೆಯಲ್ಲಿ ಒಂದು ದಿವಸ ಬೆಳಿಗ್ಗೆ ಕಾಂ ಎ. ಕೃಷ್ಣಶೆಟ್ಟರನ್ನು ತನ್ನ ಸಂಗಾತಿಯಾಗಿ ತೆಗೆದುಕೊಂಡು ಕಾಂ. ಪಿ. ಸುಂದರಯ್ಯನವರು ಪಶ್ಚಿಮಘಟ್ಟಗಳನ್ನು ಅದರ ಕೆಲವು ಆಯಕಟ್ಟಿನ ಸ್ಥಳಗಳನ್ನು ನೋಡಿ ಬರಲು ಹೊರಟರು. ಕೃಷ್ಣಶೆಟ್ಟರು ಆ ಸಂಗತಿಯ ಬಗ್ಗೆ ಹೀಗೆ ಹೇಳುತ್ತಿದ್ದರು. "ಕಾಂ. ಪಿ. ಸುಂದರಯ್ಯನವರು ನಮ್ಮ ದೇಶ ಕ್ರಾಂತಿಯಾದ ನಂತರ ಪಶ್ಚಿಮ ಘಟ್ಟದಲ್ಲಿ ಸರಿಯುವ ಅಪಾರ ನೀರು ನಿಷ್ಫಲವಾಗಿ ಸಮುದ್ರಕ್ಕೆ ಹೋಗಿ ಸೇರುವುದನ್ನು ತಡೆಗಟ್ಟಿ ಅದನ್ನು ಕರ್ನಾಟಕದ ಒಣಪ್ರದೇಶಗಳಲ್ಲಿ ಹರಿಯುವಂತೆ ಮಾಡುವ ಯೋಜನೆಗಳನ್ನು ಕುರಿತು ಗಂಭೀರವಾಗಿ ಆಲೋಚನೆ ಮಾಡುತ್ತಿದ್ದಾರೆ". "ಕಾಂ. ಪಿ. ಸುಂದರಯ್ಯನವರು ಕ್ರಾಂತಿಯ ಹೋರಾಟ ಬಂದಾಗ ಪಶ್ಚಿಮಘಟ್ಟಗಳ ಆಯಕಟ್ಟಿನ ಸ್ಥಳಗಳನ್ನು ಹೇಗೆ ಉಪಯೋಗಿಸಿ ಕೊಳ್ಳಬಹುದು ಎಂದು ಯೋಚಿಸುತ್ತಿದ್ದಾರೆ"....ಇತ್ಯಾದಿ.

ಬೆಂಗಳೂರಿನಲ್ಲಿ ನಡೆದ ಒಂದು ರಾಜ್ಯಸಮಿತಿಯ ಸಭೆಗೆ ಎಲ್ಲಾಸದಸ್ಯರು ಹಾಜರಾಗಿದ್ದರು ಕಾಂ. ಪಿ. ಸುಂದರಯ್ಯನವರು ಉಪಸ್ಥಿತರಿದ್ದರು. ಆಗ ತಾನೇ ಕೇಂದ್ರಸಮಿತಿಯಿಂದ (1973 ರಲ್ಲಿ) ಒಂದು ಸರ್ಕ್ಯುಲರ್ ಬಂದಿತ್ತು. ಯೋಜನಾಬದ್ಧವಾಗಿ ಕೆಲಸ ಮಾಡುವುದಕ್ಕಾಗಿ ಕರ್ನಾಟಕದಲ್ಲಿ ಯೋಜನೆಯನ್ನು ನೀವು ತಯಾರು ಮಾಡಿರಿ ಎಂದು ಅದರಲ್ಲಿ ನಿರ್ದೇಶನವಿತ್ತು. ಸಮಿತಿಯು ಎರಡು ದಿನಗಳ ಚರ್ಚೆ ವಿನಿಮಯ ಮಾಡಿ, ಕಾಂ. ಪಿ. ಸುಂದರಯ್ಯನವರ ಸಲಹೆ ಪಡೆದು ರಾಜ್ಯದಲ್ಲಿ ಎಲ್ಲಿ ನಾವು ವಿಶೇಷವಾಗಿ ಗಮನಕೊಟ್ಟು ಜನತೆಯ ಚಳುವಳಿಯನ್ನು ಬೆಳೆಸಲು ಮತ್ತು ಪಕ್ಷದ ಸಂಘಟನೆಯನ್ನು ಕಟ್ಟಲು ಪ್ರಯತ್ನಿಸಬೇಕು ಎಂಬ ಯೋಜನೆಯನ್ನು ಅಂಗೀಕರಿಸಿತು. ಆ ಯೋಜನೆಯನ್ನು ಇಂದು ನಾವು ಪುನರಾವಲೋಕನ ಮಾಡಿದಾಗ ಅದರಲ್ಲಿ ಹಲವು ಲೋಪದೋಷಗಳು ಕಂಡುಬಂದರೂ, "ಯೋಜನಾಬದ್ಧವಾಗಿ ಕಾರ್ಯಕ್ರಮ ನಿರೂಪಿಸಿ ಅದನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುತ್ತ ಹೋದರೆ ಮಾತ್ರ

(6ನೆಯ ಪುಟಕ್ಕೆ)

ಪಕ್ಷಕ್ಕೆ ಸೇರಿದ ಮೇಲೆ ತನ್ನೆಲ್ಲಾ ಆಸ್ತಿಯನ್ನು ಪಕ್ಷದ ಸ್ವಾಧೀನಪಡಿಸಿದರು ಕಾಂ|| ಸುಂದರಯ್ಯನವರು. ಅವರ ಮರಣದ ಸಮಯದಲ್ಲಿ ಪಕ್ಷ ಅವರ ಏಕಮಾತ್ರ ಆಸ್ತಿಯಾಗಿತ್ತು.

—ಹರಿಕಿಶನ್‌ಸಿಂಗ್ ಸುರಜಿತ್

ಆ ದಿನ ..... ತೆಲಂಗಾಣದ ಒಂದು ವೀರಗಾಥೆ

ತೆಲಗು ಮೂಲ :
ಶ್ರೀ ತೋಟ್ಲೆ ಮಲ್ಲೂರು
ಅನುವಾದ :
ಜಿ. ಎನ್. ನಾಗರಾಜ್

1948ನೇ ಇಸ್ವಿ ಫೆಬ್ರವರಿ ತಿಂಗಳು. ಹೈದರಬಾದ್ ನಿಜಾಮನ ರಾಜ್ಯದಲ್ಲಿ ಎಲ್ಲೆಲ್ಲೂ ನಿಜಾಮನ ಪೋಲಿಸರು, ರಜಾಕಾರ ಗೂಂಡಾಗಳು ಗ್ರಾಮಗಳ ಮೇಲೆ ಬಿದ್ದು, ಮನೆಗಳನ್ನು ಲೂಟಿ ಮಾಡಿ, ಜನರನ್ನು ಚಿತ್ರಹಿಂಸೆಗೆ ಗುರಿ ಮಾಡುತ್ತಾ, ಜನರ ಮುಂದಾಳುಗಳನ್ನು ಕೊಲೆ ಮಾಡುತ್ತಾ, ಹೆಂಗಸರ ಶೀಲಹರಣ ಮಾಡತ್ತಾ, ದಾಂಧಲೆ ಮಾಡುತ್ತಿದ್ದ ಭಯಂಕರ ಕಾಲವದು. ಜನರು ತಮ್ಮ ಪ್ರಾಣವನ್ನು ಅಂಗೈಯಲ್ಲಿಟ್ಟುಕೊಂಡು ಯಾವ ಗಳಿಗೆಯಲ್ಲಿ ಏನಾಗುವುದೊ ಎಂಬ ಆತಂಕದಿಂದ ಕಾಲದೂಡುತ್ತಿದ್ದ ದಿನಗಳವು.

ಈ ನಿಜಾಮನ ಆಳಿಕೆಗೆ ಸೇರಿದ್ದ ತೆಲಾಂಗಣದಲ್ಲಿ ಜನರು ಭೂಮಿಗಾಗಿ, ಅನ್ನಕ್ಕಾಗಿ, ಬಿಟ್ಟಿ ಚಾಕರಿ ರದ್ದು ಮಾಡಬೇಕೆಂಬುದಕ್ಕಾಗಿ, ಪಟೇಲ ಪಟ್ವಾರೀ, ಶ್ಯಾನುಭೋಗ, ಕುಲಕರ್ಣಿಗಳ ದೋಚುವಿಕೆ, ದೌರ್ಜನ್ಯಗಳ ನಿಲಿಕೆಗಾಗಿ, ನಿಜಾಮನ ನಿರಂಕುಶ ಬರ್ಬರ ಪ್ರಭುತ್ವವನ್ನು, ಈ ಆಳಿಕೆಯ ಆಧಾರ ಸ್ತಂಭಗಳಾದ ಜಮೀನುದಾರ, ಜಾಗೀರುದಾರರನ್ನು, ಬಲಿಹಾಕುವುದಕ್ಕಾಗಿ, ನಿರ್ಮೂಲ ಮಾಡುವುದಕ್ಕಾಗಿ, ನಡೆಸುತ್ತಿದ್ದ ಕ್ರಾಂತಿಕಾರಿ ಹೋರಾಟ ಕಾಡುಗಿಚ್ಚಿನಂತೆ ಹರಡಿದ್ದ ಕಾಲವದು, ಜನಸಮಸ್ಥ ರಧನ, ಮಾನ, ರಕ್ಷಣೆಗಾಗಿ ಜನರು "ಪ್ರಜಾ ರಕ್ಷಣ ದಳ" ಗಳನ್ನು ರಚಿಸಿಕೊಂಡು ಯಾವ ಹೊತ್ತಿನಲ್ಲೂ ಪ್ರಜೆಗಳನ್ನು ಕಾಪಾಡುತ್ತಿದ್ದ ಕಾಲವದು.

ಅಂತಹ ಕಾಲದಲ್ಲಿ ಒಂದು ರಾತ್ರಿ 10 ಜನರ ನಮ್ಮ ದಳ, ಪರ್ಯಾಯಪಲ್ಲಿಯಲ್ಲಿ ರಾತ್ರಿ ಮಲಗಿ ಬೆಳಗು ಮೂಡುವ ಮೊದಲೇ ಎದ್ದು ಕೊತ್ತಗುಡಂ ಅನ್ನು ಸೇರಿಕೊಳ್ಳಬೇಕೆಂದು ಹೊರಟೆದ್ದೆವು. ಹತ್ತಿರದಲ್ಲಿಯೇ ಇದ್ದ ಅನ್ನಾರಾಂ ಗ್ರಾಮವನ್ನು ಸೇರುವಷ್ಟರಲ್ಲಿ ಬೆಳಗ್ಗೆ 6 ಗಂಟೆ. ಆ ಹಳ್ಳಿಯಲ್ಲಿ ರೈತರು ಎದ್ದು ಹೊಲಗಳಿಗೆ, ಬೆಳಗಿನ ಕೆಲಸಗಳಿಗೆ ಹೊರಡುತ್ತಿದ್ದಾರೆ ಊರಿನಲ್ಲಿ ಕೆಲವರು ದೊಡ್ಡವರು, ಮಕ್ಕಳು ಹಸುಗಳನ್ನು ಮೇಯಿಸುವುದಕ್ಕಾಗಿ ಊರಿನ ಗೋಮಾಳಕ್ಕೆ ಹೊಡೆದುಕೊಂಡು ಹೋಗುತ್ತಿದ್ದಾರೆ, ಹೆಂಗಸರು ಮನೆ ಬಾಗಿಲ ಮುಂದೆ ಗುಡಿಸಿ ಸಾರಿಸುವುದರಲ್ಲಿ ನಿರತರಾಗಿದ್ದಾರೆ, ಎಲ್ಲರೂ ನಿದ್ದೆಯಿಂದೆದ್ದು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದ್ದಾರೆ.

ಅಷ್ಟರಲ್ಲಿ ಯಾರೋ ಕೂಗುಹಾಕಿದರು. "ಕುದುರೆ ಸವಾರಿ ಪೋಲಿಸರು ಬರುತ್ತಿದ್ದಾರೆ. ಸವಾರಿ ಪೋಲಿಸರು ಬರುತ್ತಿದ್ದಾರೆ" ಈ ಸುದ್ದಿ ಕ್ಷಣಕಾಡಲ್ಲಿ ಹಳ್ಳಿಗೆಲ್ಲಾ ಹರಡಿಹೋಯಿತು. ಜನ ಎಲ್ಲಿದ್ದವರು ಅಲ್ಲಿಯೇ ಮರೆಯಲ್ಲಿಅಡಗಿಕೊಂಡರು. ಕೆಲ ಕ್ಷಣಗಳಲ್ಲಿಯೇ ಮುಂಜಾನೆಯ ಸಡಗರದಲ್ಲಿದ್ದ ಬೀದಿಗಳೆಲ್ಲಾ ನಿರ್ಜನವಾಯಿತು.

ಅನ್ನಾರಂ ಗ್ರಾಮಕ್ಕೆ ಮೂರು ಮೈಲಿ ದೂರದಲ್ಲಿರುವ ತಂಗತುರ್ತಿ ಎಂಬಲ್ಲಿ ಒಂದು ಪೋಲಿಸ್ ಠಾಣೆಯಿದೆ. ಅಲ್ಲಿ ಕೋವಿಧಾರಿ ಪೋಲಿಸರಿದ್ದಾರೆ. ರಜಾಕಾರರು ಕ್ಯಾಂಪು ಹಾಕಿದ್ದಾರೆ. ಈ ಕ್ಯಾಂಪಿನಲ್ಲಿ ಅಶ್ವದಳವೂ ಇದೆ. ಆ ದಿನ 7 ಕುದುರೆಗಳೊಂದಿಗೆ 25 ಜನ ಪೋಲಿಸರು, ರಜಾಕಾರರು, ತಂಗ ತುರ್ತಿಗೆ 15 ಮೈಲಿ ದೂರದಲ್ಲಿರುವ ಏವೂರು ಪೋಲಿಸ್ ಕ್ಯಾಂಪಿಗೆ ಹೋಗುತ್ತಿದ್ದಾರೆ. ಆ ಕಾರಣಕ್ಕಾಗಿಯೇ ಅನ್ನಾರಂನಲ್ಲಿ ತಡಮಾಡದೆ ಏವೂರು ದಾರಿಯಲ್ಲಿ ಅವಸರದಿಂದ ಹೊರಡುತ್ತಿದ್ದಾರೆ.

ಅಲ್ಲಿಯವರೆಗೂ ಕೊತ್ತಗುಡಂಗೆ ಹೋಗಬೇಕೆಂದುಕೊಂಡು ಬರುತ್ತಿದ್ದ ನಮ್ಮ ದಳಕ್ಕೆ ಒಂದು ಹೊಸ ವಿಚಾರ ಬಂತು. ಈ ದುಷ್ಕರ್ಮಿಗಳು ಏವೂರು ಸೇರುವ ದಾರಿಯಲ್ಲಿ ಯಾವುದಾದರೂ ಒಂದು ಅಸಹಾಯಕ ಗ್ರಾಮದ ಮೇಲೆ ಬಿದ್ದು ದೋಚುತ್ತಾರೆ. ಆದುದರಿಂದ ಈ ಪೋಲಿಸರನ್ನು ಹಿಂದೆ ಹಾಕಿ, ಒಳ್ಳೆಯ ಆಯಕಟ್ಟಿನ ಜಾಗವನ್ನು ಮುಂಚಿತವಾಗಿಯೇ ಸೇರಿ ಈ ಪೋಲಿಸರು ರಜಾಕಾರರು ಗ್ರಾಮುವನ್ನೂ ದೋಚುವುದನ್ನು ತಡೆಯಬೇಕೆಂಬ ನಿರ್ಧಾರಕ್ಕೆ ಬಂದೆವು. ಆದರೆ ಪೋಲೀಸರು ಹೋಗುತ್ತಿದ್ದ ಮುಖ್ಯ ದಾರಿಯಲ್ಲಿಯೇ ಹೋದರೆ ಅದನ್ನು ದಾಟಿ ಮುಂದೆ ಹೋಗುವುದು ಅಸಾಧ್ಯ. ನಾವು ದಾರಿಯನ್ನು ಬಿಟ್ಟು ಹೊಲಗಳ ಮೇಲೆ ಹಾದು ಅವರನ್ನು ದಾಟಬೇಕೆಂದುಕೊಂಡೆವು. ಅಷ್ಟರಲ್ಲಿಯೇ ಅನ್ನಾರಂಗ್ರಾಮವನ್ನು ಬಿಟ್ಟು ಹೊರಹೊರಟರು ಎಂಬ ಸುದ್ದಿ ಮುಟ್ಟಿತು. ಇನ್ನು ಇಲ್ಲಿ ಒಂದು ಕ್ಷಣವೂ ಆಲಸ್ಯ ಮಾಡಬಾರದೆಂದು ತಕ್ಷಣವೇ ಹೊರಟೆವು. ಪೋಲೀಸರು ಚೆನ್ನಾಗಿರುವ ರಸ್ತೆಯಲ್ಲಿ ಕುದುರೆಗಳ ಮೇಲೆ ಹೊರಟಿದ್ದಾರೆ. ನಾವು ಹೊಲಗಳ ಮಧ್ಯೆ ಗಿಡಗಳನ್ನು ಮರಗಳನ್ನು ದಾಟುತ್ತಾ, ಕೆಸರು ಮಣ್ಣಿನಲ್ಲಿ ಸಿಕ್ಕಿಕೊಳ್ಳುತ್ತಾ ಹೋಗಬೇಕಾಗಿತ್ತು. ಹೀಗಾಗಿ ಅವರು ನಮಗಿಂತ ವೇಗವಾಗಿ ಮುಂದೆ ಮುಂದೆಯೇ ಹೋಗುತ್ತಿದ್ದಾರೆ.

ನಮ್ಮ ದಳ ಹೆದ್ದಾರಿ ಬಿಟ್ಟು ಹೊಲಗಳ ಮೇಲೆ ಪೋಲೀಸರನ್ನು ಬೆಂಬತ್ತಿರುವುದನ್ನು ಹೊಲಗಳಲ್ಲಿ ಬೇಸಾಯದ ಕೆಲಸ ಕಾರ್ಯದಲ್ಲಿ ತೊಡಗಿದ್ದ ಜನ ನೋಡುತ್ತಲೇ ಇದ್ದಾರೆ. ಈ ದಳ ಪೋಲಿಸರ ಮೇಲೆ ಧಾಳಿ ಮಾಡಲು ಹೋಗುತ್ತಿದೆ ಎಂಬುದನ್ನು ಅರ್ಥ ಮಾಡಿಕೊಂಡಿದ್ದಾರೆ. ಮುಂದೇನು ಜರುಗುತ್ತದೆಯೋ ಎಂಬ ಕುತೂಹಲ ಅವರ ಮುಖದ ಮೇಲೆ ಒಡೆದು ಕಾಣಿಸುತ್ತಿದೆ ಆದರೆ ಜನ ಇದನ್ನೆಲ್ಲಾ ನೋಡುತ್ತಿದ್ದರೂ ಪೋಲಿಸರಿಗೆ ಈ ಸುದ್ದಿ ಮುಟ್ಟಿಸುವ ಸಾಹಸ ಮಾಡಲಿಲ್ಲ.

ಈ ರೀತಿ ಪೋಲಿಸರನ್ನು ಬೆಂಬತ್ತಿ ಹೊರಟಿದ್ದ ನಾವು ಪೋಲಿಸರನ್ನು ಸಂಗಂ ಗ್ರಾಮದಲ್ಲಿಅಡ್ಡಹಾಕಬೇಕೆಂದುಕೊಂಡಿದ್ದೆವು. ಅದು ಸಾಧ್ಯವಾಗಲಿಲ್ಲ ಎಲುಕಪಲ್ಲಿಗೆ ಸೇರಿ ದಾರಿಯಲ್ಲಿ ಅವರಿಗೆ ಎದುರು ಬೀಳಬೇಕೆಂದು ಕೊಂಡಿದ್ದೆವು. ಅದೂ ಸಾಧ್ಯವಾಗಲಿಲ್ಲ. ಚಿಲುಪಕುಂಟೆ ಗ್ರಾಮವನ್ನು ಅವರು ಸೇರುವುದರೊಳಗೆ ನಾವು ಸೇರಬೇಕು. ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ ಎಂದು ಕೊಂಡೆವು. ಆದರೆ ನಮ್ಮ ಪ್ರಯತ್ನ ವೃಥಾ ಆಯಿತು ನಾವು ಚಿಲುಪಕುಂಟೆ ಸೇರುವಷ್ಟರಲ್ಲಿ ಅವರು ನೂತನಕಲ್ಲುಹಳ್ಳಿ ತಲುಪಿದ್ದಾರೆ. ಉತ್ಸಾಹದಿಂದ ಧಾವಿಸುತ್ತಿದ್ದ ನಮ್ಮನ್ನು ನಿರಾಸೆಯು ನೆರಳು ಕವಿಯಿತು. ಬಹಳ ದೂರವನ್ನು ಬೇಗ ದಾಟಬೇಕೆಂದು ಹಳ್ಳ ದಿಣ್ಣೆಗಳಲ್ಲಿ ಹತ್ತಿ ಇಳಿದು ಅವಸರದಿಂದ ಧಾವಿಸುತ್ತಾ ಬಂದ ನಮಗೆ ಸುಸ್ತೂ ಆಗಿತ್ತು. ಇನ್ನು ಮುಂದೆ ನಡೆಯುವುದು ಅಸಾಧ್ಯ ಎನುವಂತಾಯಿತು.

ಆದರೂ ಚಿಲುಪಕುಂಟೆಯಲ್ಲಿ ಒಂದು ಐದುನಿಮಿಷ ಚರ್ಚಿಸಿದೆವು.

ಪೋಲಿಸರು ಏವೂರು ಗ್ರಾಮವನ್ನು ಸೇರಲು ಕೇವಲ ಒಂದು ಊರನ್ನು ಮಾತ್ರ ದಾಟಬೇಕಾಗಿದೆ. ಅಲ್ಲಿ ಅವರು ನಿಂತು ಆ ಊರಿನ ಮೇಲೆ ಧಾಳಿಮಾಡಿದ್ದರೆ ನಮಗೆ ಖಂಡಿತಾ ಸಿಗುತ್ತಾರೆ ಎಂಬ ವಿಚಾರ ಬಂತು. ಈ ಯೋಚನೆ ನಿರಾಸೆಕವಿದಿದ್ದ ನಮ್ಮಲ್ಲಿ ಮತ್ತೆ ಆಸೆಯನ್ನು ಚಿಗುರಿಸಿತು. ನಮ್ಮಲ್ಲಿ ಅಳಿದುಳಿದಿದ್ದ ಶಕ್ತಿಯನ್ನೆಲ್ಲಾ ಕೂಡಿಸಿಕೊಂಡು ವೇಗವಾಗಿ ನಡೆಯುತ್ತಾ ನೂತನಕಲ್ಲು ಸೇರಿಕೊಂಡೆವು.

ಅಲ್ಲಿ ನಾವು ಅಂದು ಕೊಂಡಂತೆಯೇ ಆಗಿದೆ ಪೋಲೀಸರು ನೂತನಕಲ್ಲು ಗ್ರಾಮದ ಮೇಲೆ ಧಾಳಿ ಮಾಡಿ ಜನರನ್ನು ಬೆದರಿಸಿ, ಹಾಲು, ಸಿಗರೇಟು ಪೆಟ್ಟಿಗಳು, ಕೋಳಿಗಳು, ಎಣ್ಣೆ ಡಬ್ಬಗಳು, ಧಾನ್ಯಗಳು ಇತರ ಸರಕುಗಳನ್ನು ಲೂಟಿ ಮಾಡುತ್ತಿದ್ದಾರೆ. ಊರಿನ ದಕ್ಷಿಣ ಭಾಗದಲ್ಲಿದ್ದ ಬಜಾರನ್ನು ಸೇರಿಕೊಂಡ ನಮಗೆ ಈ ಧಾಳಿಯ ಬಗ್ಗೆ ಜನ ದೂರಿತ್ತರು ಈಗ ಇರುವ ಅಲ್ಪ ಸಮಯವನ್ನು ಬಿಡದೆ ಸದುಪಯೋಗ ಮಾಡಿಕೊಂಡರೆ ಮಾತ್ರ ನಮಗೆ ಈ ಧಾಳಿಕೋರರು ದೊರಕುತ್ತಾರೆ. ಸ್ವಲ್ಪ ವ್ಯತ್ಯಾಸವಾದರೂ ತಪ್ಪಿಸಿಕೊಳ್ಳುತ್ತಾರೆ. ಆದುದರಿಂದ ತ್ವರೆಯಲ್ಲಿ ಕ್ರಮ ಕೈಗೊಳ್ಳಬೇಕೆಂದುಕೊಂಡು ಊರ ಹೊರಗಿದ್ದ ತೋಪೊಂದನ್ನು (ಮರಗಳ ಗುಂಪು) ಧಾಳಿಯ ಆಯ ಕಟ್ಟಿನ ಜಾಗವನ್ನಾಗಿ ಆರಿಸಿಕೊಂಡು ಸೇರಿಕೊಂಡೆವು.

ಅಷ್ಟು ಹೊತ್ತಿಗೆ ಬೆಳಗ್ಗೆ 10 ಗಂಟೆ. ನಮ್ಮ ದಳದಲ್ಲಿ ಎಲ್ಲರಿಗೂ ಸುಸ್ತಾಗಿದೆ. ಇಷ್ಟು ದೂರ ಬೇಗ ಬೇಗ ಧಾವಿಸಿ ಬಂದ ನಮಗೆ ಬಾಯಾರಿಕೆಯಾಗಿದೆ. ಸ್ವಲ್ಪ ದೂರದಲ್ಲಿರುವ ಬಾವಿಯವರೆಗೆ ಹೋಗಿ ನೀರಡಿಕೆಯನ್ನು ತೀರಿಸಿ ಕೊಳ್ಳೋಣವೆಂದರೆ ಸಮಯವಿಲ್ಲ. ನಾವು ಅಲ್ಲಿ ಹೋದಾಗ ಪೋಲಿಸರು ದಾಟಿ ಹೋದರೆ ನಮ್ಮ ಎಲ್ಲಾ ಶ್ರಮ ವ್ಯರ್ಥವಾಗುತ್ತದೆ. ಸರಿ, ಆ ತೋಪಿನಲ್ಲಿನಿಂತಿದ್ದ ಮಳೆಯನೀರನ್ನು ಕುಡಿದು ನಮ್ಮ ಬಾಯಾರಿಕೆಯನ್ನು ನೀಗಿಸಿಕೊಂಡೆವು. ತಡ ಮಾಡದೆ 5 ಜನದ ಎರಡು ಗುಂಪಾಗಿ ದಾರಿಯ ಪಕ್ಕದಲ್ಲಿದ್ದ ಮರಗಳ ಹಿಂದೆ ಅಡಗಿ ಕುಳಿತು ವ್ಯೂಹ ರಚಿಸಿದೆವು.

ನಾವು ನಮ್ಮ ಈ ಆಯಕಟ್ಟಿನ

(6ನೆಯ ಪುಟಕ್ಕೆ)

ಕಾಂ॥ ಸುಂದರಯ್ಯನವರು ಜನಸಮುದಾಯವನ್ನು ಅಪಾರವಾಗಿ ಪ್ರೀತಿಸುತ್ತಿದ್ದರು ಮತ್ತು ಯಾವಾಗಲೂ ಅವರ ಮಧ್ಯೆ ಸಂತೋಷದಿಂದಿರುತ್ತಿದ್ದರು.

ಜನಸಮುದಾಯದಿಂದ ನಾವು ಕಲಿಯಬೇಕೆಂಬುದು ಅವರ ಜೀವಿತದ ಧ್ಯೇಯವಾಗಿತ್ತು ಆ ಮೂಲಕ ಮಾರ್ಕ್ಸ್‌ವಾದದ ತತ್ವವನ್ನು ಕಾರ್ಯಾಚರಣೆಯೊಂದಿಗೆ ಸೇರಿಸಲು ಪ್ರಯತ್ನಿಸಿದರು ಅವರು.

—ಹರ್ ಕಿಷನ್ ಸಿಂಗ್ ಸುರಜೀತ್

ತೆಲಂಗಾಣ ಹೋರಾಟವೆಂಬ ಈ ಮಹಾ ಜನಹೋರಾಟಕ್ಕೆ ನಾಯಕತ್ವ ಕೊಡುತ್ತಿದ್ದ ವಿಶಾಲಾಂಧ್ರ ರಾಜ್ಯ ಕಾರ್ಯದರ್ಶಿ ಮಂಡಲದ ಕೇವಲ ಏಳು ಜನರಲ್ಲೊಬ್ಬ ನಾಯಕರಾಗಿರಲಿಲ್ಲ ಕಾಂ. ಪಿ. ಸುಂದರಯ್ಯನವರು. ತಿಂಗಳುಗಟ್ಟಲೆ ಈ ಜನ ಹೋರಾಟದ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು ಇವರು. ಈ ಹೋರಾಟದ ರಾಜಕೀಯ-ಕಾರ್ಯತಾಂತ್ರಿಕ ಮಾರ್ಗವನ್ನು ರೂಪಿಸುವುದರಲ್ಲಿ, 5 ವರ್ಷಗಳ ದೀರ್ಘ ಕಾಲದ ಈ ಸಾಯುಧ ಹೋರಾಟವನ್ನು ನಡೆಸುವುದರಲ್ಲಿ ನಾಯಕತ್ವದ ಪಾತ್ರ ವಹಿಸಿದ್ದರು ಕಾ. ಸುಂದರಯ್ಯನವರು.

ಕಾಂ. ಎಂ. ಬಸವಪುನ್ನಯ್ಯ

ಧಾರವಾಡದಲ್ಲಿ ಮೇ ಶತಮಾನೋತ್ಸವ

ಸಿ. ಐ. ಟಿ. ಯ ರಾಜ್ಯಸಮಿತಿಯ ನಿರ್ಣಯದಂತೆ ಸುಮಾರು 450 ಸಿ. ಐ. ಟಿ. ಯು ಧ್ವಜಗಳನ್ನು ಕಾರ್ಯಕರ್ತರು ತಮ್ಮ ಮನೆಯ ಮೇಲೆ ಹಾರಿಸುವುದರ ಮೂಲಕ, ಮೇ ದಿನಾಚರಣೆಯು ಕಾರ್ಮಿಕರ ಬೃಹತ್ ಮೆರವಣಿಗೆಯ ಮೂಲಕ,ಆಚರಿಸಲಾಯಿತು. ವಿಮಾ,ಬ್ಯಾಂಕ್ ನೌಕರರು ಸಿಐಟಿಯು ನೇತೃತ್ವದ ಮೈಸೂರು ಕಿರ್ಲೋಸ್ಕರ್ ಪ್ಲಾಯ್‌ವುಡ್,ಮೊಪೆಕ್ಸ್ ಕೆಲಸಗಾರರು ಮಿತ್ರ ಸಂಘಟನೆಗಳಾದ ಕೆ ಎಂ.ಎಫ್ ಟೈವಾಕ್, ಭೊರುಕಾ ಟೆಕ್ಸ್‌ಟೈಲ್ ಕಾರ್ಮಿಕರು ಅಲ್ಲದೆ ವಿದ್ಯಾರ್ಥಿ–ಯುವಜನ ಕಾರ್ಯಕರ್ತರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು ವಸತಿ ರಹಿತ ಸಂಘದ ಮಹಿಳೆಯರು ಇದರಲ್ಲಿ ಪಾಲ್ಗೊಂಡಿದ್ದರು. ಮೆರವಣಿಗೆ ಉದ್ದಕ್ಕೂ ಘೋಷಣೆಗಳ ಜತೆಯಲ್ಲೆ ಹಲಗೆ, ಯುವಕ ಕಾರ್ಯಕರ್ತರಿಂದ ಕ್ರಾಂತಿಗೀತೆಗಳು ಒಂದು ವಿಶೇಷವಾಗಿತ್ತು. ಇನ್ನೊಂದು ವಿಶೇಷವೆಂದರೆ ಪುರುಷ ಮತ್ತು ಮಹಿಳೆ ಕುಡುಗೋಲು ಸುತ್ತಿಗೆಹಿಡಿದುಕೊಂಡಿದ್ದ ಚಿತ್ರ.ಕರಪತ್ರಗಳನ್ನು ಮುದ್ರಿಸಿ ಹಂಚಲಾಗಿತ್ತು. ಬಹಿರಂಗ ಸಭೆಯ.ಲ್ಲಿ ವಿವಿಧ ಸಂಘಟನೆಗಳ ನಾಯಕರು ಮಾತನಾಡಿದರು.

ಸರ್ವಸದಸ್ಯರ ಸಭೆ

ಧಾರವಾಡದ ದಿ ಇಂಡಿಯನ್ ಪ್ಲಾಯವುಡ್ ಕಾರ್ಮಿಕ ಸಂಘದ ಸರ್ವಸದಸ್ಯರ ಸಭೆಯು ವಿಜೆಕೆ ನಾಯರ್ ಅವರಿಂದ ಧ್ವಜಾರೋಹಣ ನಡೆಸಿ ಸೂರ್ಯನಾರಾಯಣರಾವ್ ಅವರಿಂದ ಉದ್ಘಾಟಿಸಲ್ಪಟ್ಟಿತು. ಸಿ ಆರ್. ಭಟ್ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಎಂ. ಬಿ. ಕಟ್ಟಿ ವರದಿ ಓದಿದರು. ವಿ ಎಸ್. ಹಳ್ಳಿಕಟ್ಟಿ ಮಾತನಾಡಿದರು. ಹಾಸಿಮ ಧಾರವಾಡ ಅಭಿನಂದನೆ ಸಲ್ಲಿಸಿದರು. ವಿವಿಧ ಸಂಘಟನೆಗಳ ನಾಯಕರು ಶುಭಾಶಯಕೋರಿ ಮಾತನಾಡಿದರು.

ಮೇ ದಿನ ಮತ್ತು ಕಾರ್ಮಿಕ ವರ್ಗದ ಕರ್ತವ್ಯಗಳು

ಲೇಖಕರು : ಕಾಂ. ವಿಜೆಕೆ ನಾಯರ್ B.A LLB.

ಪ್ರಕಾಶಕರು : ಆಯ್, ಪಿ. ಕೆ. ಸಂಘ ಧಾರವಾಡ

ಪ್ರತಿಗಳು ಇಲ್ಲಿ ದೊರೆಯುತ್ತವೆ ;

1) ಪ್ರಧಾನ ಕಾರ್ಯದರ್ಶಿ
ದಿ ಇಂಡಿಯನ್ ಪ್ಲಾಯ್‌ವುಡ್
ಕಾರ್ಮಿಕ ಸಂಘ, ಹತ್ತಿಕೊಳ್ಳ
ಧಾರವಾಡ

೨) ಸಿ. ಐ. ಟಿ ಯು ರಾಜ್ಯಕೇಂದ್ರ
ಬೆಂಗಳೂರು

3) ಕ್ರಿಯಾ ಪುಸ್ತಕಾಲಯ
ಬೆಂಗಳೂರು.

ಬೆಲೆ ರೂ. 2-50

ನಿರುದ್ಯೋಗಿ ಕಾರ್ಮಿಕರ ಸಮಾವೇಶ

ಧಾರವಾಡ ಜಿಲ್ಲಾ ನಿರುದ್ಯೋಗಿ ಕಾರ್ಮಿಕರ ಸಮಾವೇಶವನ್ನು ಸಿ.ಐ.ಟಿ.ಯು ಅಧ್ಯಕ್ಷರಾದ ಸೂರ್ಯನಾರಾಯಣ ರಾವ್ ಉದ್ಘಾಟಿಸಿದರು. ಸಿ. ಆರ್. ಭಟ್ ಅತಿಥಿಗಳಾಗಿದ್ದರು. ವಿಜೆಕೆ ನಾಯರ್ ಅಧ್ಯಕ್ಷತೆ ವಹಿಸಿದ್ದರು. ಹುಬ್ಬಳ್ಳಿ ಧಾರವಾಡಗಳ ಎಸ್. ಎಫ್. ಐ., ಡಿ.ವೈ. ಎಫ್. ಐ ಅಲ್ಲದೆ ಧಾರವಾಡದ ಸುತ್ತಲಿನ ನಾಲ್ಕು ಹಳ್ಳಿಗಳಿಂದ ನಿರುದ್ಯೋಗಿಗಳು ಸಮಾವೇಶಕ್ಕೆ ಬಂದಿದ್ದರು. ಮೇ ದಿನ ಕಾರ್ಮಿಕ ವರ್ಗದ ಕರ್ತವ್ಯಗಳು ಎಂಬ ಪುಸ್ತಿಕೆಯನ್ನು ಬಿಡುಗಡೆ ಮಾಡಲಾಯ್ತು. ಕೊನೆಯಲ್ಲಿ ಎಂ. ಬಿ. ಕಟ್ಟಿ ವಂದನಾರ್ಪಣೆ ಮಾಡಿದರು.

ಬೆಳೆ ಸಾಲಕ್ಕಾಗಿ ಹೋರಾಟ

ಸವದತ್ತಿ ತಾಲೂಕಿನಲ್ಲಿ ಡಿ ಸಿ ಸಿ ಬ್ಯಾಂಕಿನವರು ಬೆಳೆಸಾಲ ಕೊಡದಿರುವುದನ್ನು ವಿರೋಧಿಸಿ ಕೂಡಲೇ ಬೆಳೆಸಾಲ ಮಂಜೂರು ಮಾಡಬೇಕೆಂದು ಒತ್ತಾಯಿಸಿ ಡಿ. ಸಿ. ಸಿ. ಬ್ಯಾಂಕಿನ ಮುಂದೆ 16–6–86 ರಂದು ರೈತರು ಧರಣಿಸತ್ಯಾಗ್ರಹ ಪ್ರಾರಂಭಿಸಿದರು. 17–6–86 ರಂದು ಬ್ಯಾಂಕ್ ಆಡಳಿತ ವರ್ಗ ಮಾತುಕತೆ ಪ್ರಾರಂಭಿಸಿ ಬೆಳೆಸಾಲ (2/3 ದಷ್ಟು) ಕೂಡಲೇ ಕೊಡುವುದಾಗಿ ಆಶ್ವಾಸನೆ ಕೊಟ್ಟಿತು. 18-6–86 ರಿಂದ ಧರಣಿ ಸತ್ಯಾಗ್ರಹವನ್ನು ಸ್ಥಗಿತಗೊಳಿಸಲಾಗಿದೆ. ಇದನ್ನು ಕರ್ನಾಟಕ ಪ್ರಾಂತ ರೈತ ಸಂಘ ಸವದತ್ತಿ ತಾಲೂಕ ಘಟಕ ಸಂಘಟಿಸಿತ್ತು. ಇದರ ನೇತೃತ್ವವನ್ನು ಕಪ್ಪಣ್ಣವರ, ಸಿಗ್ಲಿ, ಮುನವಳ್ಳಿ, ತೊರಗಲ್ ಮುಂತಾದವರು ವಹಿಸಿದ್ದರು. ಈ ಹೋರಾಟಕ್ಕೆ ಡಿ. ವೈ. ಎಫ್. ಐ., ಸವದತ್ತಿ ಘಟಕ ತನ್ನ ಬೆಂಬಲ ವ್ಯಕ್ತಪಡಿಸಿ ಧರಣಿಯಲ್ಲಿ ಪಾಲ್ಗೊಂಡಿತ್ತು.

ವರದಿ : ಕೃಷ್ಣ ಕಟ್ಟಿ

ಕೊಳಚೆ ಪ್ರದೇಶಗಳು

ಬೆಂಗಳೂರು ನಗರ ಕಾರ್ಪೊರೇಶನ್ ಸರ ಹದ್ದಿನಲ್ಲಿ 287 ಹಾಗೆಯೇ ಪರಿಸರದಲ್ಲಿ 200 ಕೊಳಚೆ ಪ್ರದೇಶಗಳಿವೆಯೆಂದು ಹಿಂದಿನ ನಗರ ಯೋಜನಾಧಿಕಾರಿ ರಾಮೇಗೌಡ ಹೇಳಿದ್ದಾರೆ. ಕಾರ್ಪೊರೇಶನ್ ಹದ್ದಿಯೊಳಗೆ 3,50,000 ಕೊಳಚೆ ವಾಸಿಗಳಿದ್ದಾರೆಂದೂ "ನಗರ ಕೊಳಚೆ ಪ್ರದೇಶದಲ್ಲಿಯ ಜನರಿಗೆ ವಾಸ ಮತ್ತಿನ್ನಿತರ ಸೌಕರ್ಯಗಳು" ಎಂಬ ವಿಷಯದ ಕುರಿತು ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ನಮ್ಮ ದೇಶದ ಜನ ಸಂಖ್ಯೆಯ ಶೇ 26- ರಷ್ಟು ಜನ ಕೊಳಚೆ ಪ್ರದೇಶಗಳಲ್ಲೇ ವಾಸಿಸುತ್ತಿದ್ದಾರೆಂದೂ ಈ ಶತಮಾನದ ಕೊನೆಗಾಗುವಾಗ ಅದು ಶೇ. 43.86 ರಷ್ಟಾಗ ಬಹುದೆಂಬ ಸಂಶಯ ವ್ಯಕ್ತ ಮಾಡಿದ್ದಾರೆ. ಆದರೆ ಈ ಮಹಾಶಯ ಕೊಳಚೆ ಹುಟ್ಟಿಕೊಳ್ಳಲಿಕ್ಕೆ ಏನು ಕಾರಣವೆಂಬ ಮೂಲಭೂತ ಪ್ರಶ್ನೆಯನ್ನೇ ಎತ್ತಲಿಲ್ಲ, ವಿಮರ್ಶಿಸಲಿಲ್ಲ.

ಕರ್ನಾಟಕದಲ್ಲಿ ಕಾ॥ ಪಿ. ಸುಂದರಯ್ಯನವರ ಕೆಲವು ನೆನಪುಗಳು

(4ನೆಯ ಪುಟದಿಂದ)

–ಸ್ವಯಂಸ್ಫೂರ್ತಿಯಿಂದಲಾಗಲೀ ಬರುವ ಚಳವಳಿಗಳ ಬೆನ್ನಟ್ಟಿ ಹೋಗುವುದರಿಂದಲ್ಲ-ಕ್ರಾಂತಿಕಾರಿ ಚಳುವಳಿಯನ್ನು ವಿಸ್ತರಿಸಲು ಮತ್ತು ದೃಢೀಕರಿಸಲು ಸಾಧ್ಯ"ವೆಂಬ ಮಾತನ್ನಂತೂಆಸಭೆಯ ಕಾರ್ಯಕಲಾಪಗಳು ನಮಗೆ ಕಲಿಸಿಕೊಟ್ಟಿದೆ. ಅಪಾಠವನ್ನು ನಮಗ ಕಲಿಸಿದವರು ಕಾಂ. ಪಿ. ಸುಂದರಯ್ಯನವರು.

ಇನ್ನು ಕಾಂ. ಪಿ ಸುಂದರಯ್ಯನವರ ನಿಷ್ಟುರ ಶಿಸ್ತು ಪರಿಪಾಲಕರು. ಶಿಸ್ತನ್ನು ಯಾರು ಉಲ್ಲಂಘಿಸಿದರೂ ಅದನ್ನು ಅವರು ಸಹಿಸುತ್ತಿರಲಿಲ್ಲ. ಒಬ್ಬ ಸದಸ್ಯನು ಎಷ್ಟರ ವರೆಗೆ ಪಕ್ಷದ ಸದಸ್ಯನಾಗಿರುತ್ತಾನೆ, ಅಷ್ಟರವರೆಗೆ ಅವನ ಬಗ್ಗೆ ನಮ್ಮ ನಡವಳಿಕೆ ಸಂಗಾತಿಯ ಸೌಹಾರ್ದತೆಯಿಂದ ಕೂಡಿರಬೇಕು. ಅವನ ಎಲ್ಲಾ ಹಕ್ಕುಗಳಿಗೆ ಮನ್ನಣೆ ಕೊಡಬೇಕು. ಅದೇ ಸಮಯದಲ್ಲಿ ಅವನು ಶಿಸ್ತು ಉಲ್ಲಂಘನೆ ಮಾಡಿದರೆ, ಅವನ ಕೆಲಸ ಕಾರ್ಯಗಳು ನಮ್ಮ ಚಳುವಳಿಗಳಿಗೆ ಅಡ್ಡಿಯಾಗಿ ಬಂದರೆ, ಅವನನ್ನು ತರಾಟೆಗೆ ತೆಗೆದುಕೊಂಡು ಕೂಡಲೇ ಅವನ ನಡುವಳಿಕೆಯನ್ನು ತಿದ್ದಲು ಕ್ರಮವಹಿಸಬೇಕು. ಕೆಲವು ಬಾರಿ ಪ್ರಯತ್ನ ಪಟ್ಟರೂ ಅವನು ತಿದ್ದುಪಡಿಯಾಗದಿದ್ದರೆ,ಅವನ ಮೇಲೆ ಶಿಸ್ತುಕ್ರಮವನ್ನು ತೆಗೆದುಕೊಳ್ಳಬೇಕು. ನಾನು ಕಣ್ಣಾರೆ ಕಂಡಿದ್ದೆ, ಅನುಭವಿಸಿದ್ದೆ. ಒಬ್ಬ ಸಂಗಾತಿಯ ಬಗ್ಗೆ ಅವರಿಗೆ ಎಷ್ಟೊಂದು ಪ್ರೀತಿಯಿದ್ದರೂ, ಆತನು ಎಷ್ಟು ಪ್ರಯತ್ನಿಸಿದರೂ ಶಿಸ್ತಿಗೆ ಒಳಪಡಲು ನಿರಾಕರಿಸಿದರೆ ಅವನ ಮೇಲೆ ಶಿಸ್ತುಕ್ರಮಕ್ಕೈಗೊಳ್ಳಲು ಅವರು ತಮಗೆ ಎಷ್ಟು ನೋವಾದರೂ–ಹಿಂಜರಿಯುತ್ತಿರಲಿಲ್ಲ.

ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಭಾಷಣವನ್ನಿತ್ತುದನ್ನು ನಾನು ಹಲವು ಬಾರಿ ನೋಡಿದೆ, ಕೇಳಿದ್ದೆ. ಅವರ ಭಾಷಣವು ಪ್ರತಿಸಂದರ್ಭದಲ್ಲೂ ಸರಳವಾಗಿತ್ತು. ಸುಲಭ ಶೈಲಿ, ಶಬ್ದಗಳಿಂದ ಕೂಡಿತ್ತು. ವಿಷಯಗಳನ್ನು ತರ್ಕಬದ್ಧವಾಗಿ ಜನಸಾಮಾನ್ಯರ ಮುಂದೆ ಇಟ್ಟು ಅವುಗಳ ಕುರಿತು ನಮ್ಮ ಪಕ್ಷವು ಕೈಕೊಂಡ ತೀರ್ಮಾನಗಳನ್ನು ನಿಧಾನವಾಗಿ ಸಷ್ಟವಾಗಿ ವಿವರಿಸುತ್ತಿದ್ದರು. ಪ್ರತಿಯೊಂದು ಸಂದರ್ಭದಲ್ಲಿ "ದೇಶದಲ್ಲಿ ಜನತಾಪ್ರಜಾಪ್ರಭುತ್ವ ಕ್ರಾಂತಿಯಿಂದ ಮಾತ್ರ ದೇಶದ ಮೂಲ ಸಮಸ್ಯೆಗಳಿಗೆ ಪರಿಹಾರ" ಎಂಬುದನ್ನು ಅವರು ಒತ್ತಿ ಹೇಳುತ್ತಿದ್ದರು.

ಇನ್ನು "ಭೂಮಿ"ಯ ಪ್ರಶ್ನೆ ಇಂದು ದೇಶದಲ್ಲಿ ಅತಿ ಪ್ರಮುಖ ಪ್ರಶ್ನೆಯಾಗಿದೆ ಎಂಬುದನ್ನು ಅವರು ಒತ್ತಿ ಹೇಳಿ, "ಈ ಪ್ರಶ್ನೆಗೆ ಪರಿಹಾರ ಕಾಣಲು ನಮಗೆ ಸಾಧ್ಯವಾಗದಿರುವುದರಿಂದಲೇ ನಾವು ಹಿಂದೆ ಬೀಳಲು ಕಾರಣ" ಎಂದು ಒತ್ತಿಒತ್ತಿ ಹೇಳುತ್ತಿದ್ದರು.

ಕಾಂ. ಪಿ ಸುಂದರಯ್ಯನವರ ನಿಧನದಿಂದ ಕರ್ನಾಟಕದ ಚಳವಳಿಗೆ ತುಂಬಾ ನಷ್ಟವಾಗಿದೆ ಎಂದು ನಾವು ಪುನಃ ಹೇಳಿದರೆ ಅದರಲ್ಲಿ ಏನೂ ಅತಿಶಯೋಕ್ತಿ ಇಲ್ಲ.

○

ಆ ದಿನ....

(5ನೆಯ ಪುಟದಿಂದ)

ಜಾಗದಲ್ಲಿ ವ್ಯೂಹ ರಚಿಸಿದ 15–20 ನಿಮಿಷದೊಳಗಾಗಿ ಪೋಲೀಸರು ಗ್ರಾಮದಿಂದ ದೋಚಿಕೊಂಡ ಸರಕು ಸಾಮಗ್ರಿಗಳನ್ನು ತೆಗೆದುಕೊಂಡು ಕೇಕೆ ಹೊಡೆಯುತ್ತಾ ಹಳ್ಳಿಯನ್ನು ಬಿಟ್ಟು ರಸ್ತೆಗೆ ಇಳಿದರು. ಇದನ್ನು ನೋಡುತ್ತಿದ್ದ ನಮ್ಮ ಮನಸ್ಸು ಮುಂದೆಬರುವ ದಾಳಿಯನ್ನು ಊಹಿಸಿಕೊಳ್ಳುತ್ತಿದ್ದಂತೆಯೇ ಹೃದಯ ವೇಗವಾಗಿಹೊಡೆದುಕೊಳ್ಳತೊಡಗಿತು. ಏನಾಗುತ್ತದೆಯೋ ಎಂಬ ಆತಂಕ ಹೆಚ್ಚಾಯಿತು. ಅಷ್ಟರಲ್ಲಿಯೇ ನಮ್ಮ ಕರ್ತವ್ಯ ನೆನಪಿಗೆ ಬಂತು. ವಿಜಯವನ್ನು ಸಾಧಿಸಿಯೇ ತೀರಬೇಕೆಂಬ ಧೃಢ ತೀರ್ಮಾನ ನಮ್ಮೊಳಗೆ ಮಾಡಿಕೊಂಡೆವು. ಅಲ್ಲಿಯವರೆಗೂ ಆಯಾಸ ಆವರಿಸಿದ್ದ ನಮ್ಮ ಮೈಯಲ್ಲಿ ಯಾವುದೋ ಒಂದು ನೂತನ ಶಕ್ತಿ ಆವರಿಸಿದಂತಾಯಿತು. ಈ ಹೋರಾಟದಲ್ಲಿ ಶತೃವನ್ನು ಸೋಲಿಸುವುದಕ್ಕೆ ದಳ ಸರ್ವಸನ್ನದ್ಧವಾಯಿತು. ಇಷ್ಟರಲ್ಲಿ ಪೋಲೀಸರು ಇನ್ನೇನು ಸಮೀಪಿಸುತ್ತಿದ್ದಾರೆ, ಆಗ ನಮ್ಮ ದಳದ ಕಮ್ಯಾಂಡರು ಧಾಳಿಗೆ ಆಜ್ಞೆಯಿತ್ತ. ಅಷ್ಟೇ! ಧನ್ ಧನ್ ಎಂದು ಗುಂಡಿನ ಧಾಳಿಯನ್ನು ನಮ್ಮ ದಳ ಆರಂಭಿಸಿತು. ಮುಂದೆ ಬರುತ್ತಿದ್ದ ಕುದುರೆಗಳ, ಪೋಲೀಸರ ಶರೀರದಲ್ಲಿ ಗುಂಡುಗಳು ತೂರಿಕೊಂಡುಹೋದವು. ಈ ಆಕಸ್ಮಿಕ ಗುಂಡಿನ ಧಾಳಿಗೆ ಗುರಿಯಾದ ಕುದುರೆಗಳು ಗಟ್ಟಿಯಾಗಿ ಕೆನೆಯುತ್ತಾ ಮುಂದಿನ ಎರಡು ಕಾಲುಗಳನ್ನು ಮೇಲಕ್ಕೆತ್ತಿ ಹಿಂದಕ್ಕೆ ಬಾಗುವುದಕ್ಕೆ ಆರಂಭಿಸಿದವು. ಗುಂಡೇಟು ತಿಂದ-ಪೋಲೀಸನ ಗುಂಡಿಗೆ ಅದುರಿತು. ಕುದುರೆಗಳಿಂದ ಕೆಳಕ್ಕೆ ಧುಮುಕಿ ತೆವಳುತ್ತಾ ಮರಗಳ ಮರೆಯಲ್ಲಿ ಸೇರಿಕೊಂಡರು. ಮರಗಳ ರಕ್ಷಣೆ ಪಡೆದ ಅವರಿಗೂ ನಮಗೂ ಬಹಳ ಹೊತ್ತು ಗುಂಡಿನ ಕಾಳಗ ನಡೆಯಿತು. ಆದರೆ ನಮ್ಮವರಾರಿಗೂ ಗಾಯವಾಗಲಿಲ್ಲ. ಇನ್ನು ಅಲ್ಲಿ ವಿಳಂಬ ಮಾಡಿದರೆ ತಮ್ಮ ಪ್ರಾಣಕ್ಕೆ ಸಂಚಕಾರವಾಗುತ್ತದೆಂದು ಭಾವಿಸಿದ ಈ ಪೋಲೀಸರು, ರಜಾಕಾರರು ತಾವು ಹತ್ತಿ ಬಂದ ಕುದುರೆಗಳನ್ನೂ ದೋಚಿದಸರಕನ್ನೂ ಅಲ್ಲಿಯೇ ಬಿಟ್ಟು, ಗಾಯಗೊಂಡ ತಮ್ಮ ಜೊತೆಯವರನ್ನು ಹೊತ್ತುಕೊಂಡು ಕಾಲ್ನಡಿಗೆಯಲ್ಲಿ ಏವೂರು ದಿಕ್ಕಿನಲ್ಲಿ ಓಡಿದರು.

ಈ ಧಾಳಿಯಲ್ಲಿ ದಳದ ಗುಂಡಿನ ಕಾಳಗದ ಫಲವಾಗಿ ಒಬ್ಬ ಸತ್ತನೆಂದು ಇಬ್ಬರಿಗೆ ತೀವ್ರ ಗಾಯಗಳಾಗಿದೆಯೆಂದೂ ನಂತರ ತಿಳಿದು ಬಂದಿತು.

ಪೋಲೀಸರು, ರಜಾಕಾರರು

ಓಡಿಹೋದ ನಂತರ ನಾವು ಅವರು ಬಿಟ್ಟುಹೋದ ಸರಕು ಸಾಮಗ್ರಿಗಳನ್ನು ತೆಗೆದುಕೊಂಡು ಕುದುರೆಗಳನ್ನು ಎಳೆದುಕೊಂಡು ನೂತನಕಲ್ಲು ಸೇರಿದೆವು. ನಮ್ಮ ದಾಳಿಯ ಬಗ್ಗೆ ಪೋಲೀಸರನ್ನು ಓಡಿಸುವ ಪ್ರಯತ್ನದ ಬಗ್ಗೆ ಈಗಾಗಲೇ ತಿಳಿದುಕೊಂಡಿದ್ದ ಗ್ರಾಮಸ್ಥರುನಮಗೆದಾರಿಯಲ್ಲಿಎದುರು ಬಂದು ಅದ್ಭುತ ಸ್ವಾಗತವನ್ನಿತ್ತು ಜಯಕಾರಗಳನ್ನು ಮಾಡಿದರು. ಹಳ್ಳಿಯೆಲ್ಲಾ ಮೆರವಣಿಗೆ ಮಾಡಿದರು. ಈ ಸುದ್ದಿ ದಾರಿಯಲ್ಲಿನ ಬೇರೆ ಗ್ರಾಮಗಳಿಗೂ ಹಬ್ಬಿ ದಾರಿಯಲ್ಲಿ ಎಲ್ಲಾ ಗ್ರಾಮಗಳಲ್ಲಿಯೂ ನಮಗೆ ದೊಡ್ಡ ಸ್ವಾಗತ ದೊರೆಯಿತು. ದಳದವರನ್ನಪ್ಪಿ ತಮ್ಮ ಪ್ರೇಮಾತಿಶಯವನ್ನು ಸೂಸಿದರು.

ಅದರಲ್ಲಿ, ನಾಮಾಲ ಗುರುವಯ್ಯ ಎನ್ನುವ ಒಬ್ಬ ಮಧ್ಯವಯಸ್ಕ ರೈತ ನಮ್ಮ ಕಮಾಂಡರನ್ನು ಹುಡುಕಿಕೊಂಡು ಬಂದು, "ಅಂದು ಅರ್ಜುನ ಯುದ್ಧದಲ್ಲಿ ಶತ್ರುಗಳನ್ನು ಓಡಿಸಿ ಗೋವುಗಳನ್ನು ಊರಿಗೆ ಮರಳಿಸಿದರೆ ಇಂದು ನೀವು ಪೋಲಿಸರನ್ನು ಓಡಿಸಿ ಕುದುರೆಗಳನ್ನು ಹಿಡಿದು ತಂದಿದ್ದೀರಿ ಇನ್ನು ನಮಗೆ ಸ್ವರಾಜ್ಯ ದೊರಕಿದಂತೆಯೇ" ಎಂದು ವ್ಯಾಖ್ಯಾನ ಮಾಡಿದನು. ಹೀಗೆ ಈ ಧಾಳಿ ಸುತ್ತಮುತ್ತಲ ಹತ್ತಾರು ಗ್ರಾಮಗಳಲ್ಲಿ ಸಂತೋಷವನ್ನು ಮೂಡಿಸಿ ಅವರನ್ನು ಪ್ರಭಾವಿತರನ್ನಾಗಿಸಿತು. ಅವರ ಆತ್ಮವಿಶ್ವಾಸವನ್ನು ಕುದುರಿಸಿತು.

○

ಮಂಗೋಲಿಯಾ ಜನತಾ ಕ್ರಾಂತಿಕಾರಿ ಪಕ್ಷದ 19ನೇ ಮಹಾಧಿವೇಶನ

ಮಧ್ಯ ಏಶಿಯಾದ ಉತ್ತರ ಭಾಗದಲ್ಲಿರುವ 1೮ ಲಕ್ಷ ಜನಸಂಖ್ಯೆಯ ದೇಶ ಮಂಗೋಲಿಯಾ ಜನತಾ ಗಣರಾಜ್ಯ: ಜಗತ್ತಿನ ಪ್ರಥಮ ಕಾರ್ಮಿಕ ಪ್ರಭುತ್ವ ಸ್ಥಾಪನೆಗೊಂಡ ನಾಲ್ಕೇ ವರ್ಷಗಳೊಳಗೆ ಸಮಾಜವಾದೀ ಕ್ರಾಂತಿ ನಡೆಸಿ ಸಮಾಜವಾದೀ ಮಾರ್ಗದಲ್ಲಿ ದೃಢವಾಗಿ ಮುನ್ನಡೆಯುತ್ತಿರುವ ದೇಶವಿದು. ಈ ದೇಶದ ಕ್ರಾಂತಿಯ ವಿಶಿಷ್ಟತೆಯೆಂದರೆ ಇದು ಜಗತ್ತಿನ ಅತ್ಯಂತ ಹಿಂದುಳಿದ, ಕಾರ್ಮಿಕ ವರ್ಗವೆಂಬುದೇ ಇದ್ದಿರದ ದೇಶವೊಂದರಲ್ಲಿ ನಡೆದ ಕ್ರಾಂತಿ. ಅಸಹ್ಯ ಪಾಳೆಯಗಾರೀ ಹಾಗೂ ಸಾಮ್ರಾಜ್ಯಶಾಹಿ ಶೋಷಣೆಯಿಂದ ನರಳುತ್ತಿದ್ದ ಬಡ ಮಂಗೋಲಿಯನ್ ಅಲೆಮಾರಿ ಪಶುಪಾಲಕರು ಸೋವಿಯೆತ್ ಕಾರ್ಮಿಕ ವರ್ಗದ ಬೆಂಬಲದೊಂದಿಗೆ ಈ ಕ್ರಾಂತಿ ನಡೆಸಿದರು. 65 ವರ್ಷಗಳ ಹಿಂದೆ ಅತ್ಯಂತ ಬಡ, ಹಿಂದುಳಿದ, ಅಲೆಮಾರಿ ಜನಗಳ ಈ ದೇಶ ಈಗ ತನ್ನ ನಾಗರಿಕರಿಗೆ ನೀಡಿರುವ ಸೌಲಭ್ಯಗಳು ಹಲವು ಮುಂದುವರಿದ ಬಂಡವಾಳಶಾಹೀ ದೇಶಗಳಿಗಿಂತಲೂ ಹೆಚ್ಚಿದೆ. ಅಭೂತಪೂರ್ವ ಕ್ರಾಂತಿಗೆ ಹಾಗೂ ನಂತರದ ಅಗಾಧ ಸಾಧನೆಗೆ ನೇತೃತ್ವ ನೀಡಿದ ಮಂಗೋಲಿಯನ್ ಜನತಾ ಕ್ರಾಂತಿಕಾರೀ ಪಕ್ಷದ 19ನೇ ಮಹಾಧಿವೇಶನ ರಾಜಧಾನಿ ಉಲನ್-ಬತೊರ್‌ನಲ್ಲಿ ಮೇ 28 ರಿಂದ ಜೂನ್ 1 ರ ವರೆಗೆ ಜರುಗಿತು.

ಮಂಗೋಲಿಯಾ ಜನತಾ ಕ್ರಾಂತಿಕಾರೀ ಪಕ್ಷದ 88150 ಸದಸ್ಯರ ಪರವಾಗಿ 841 ಪ್ರತಿನಿಧಿಗಳು ಈ ಅಧಿವೇಶನದಲ್ಲಿ ಭಾಗವಹಿಸಿದರು. 66 ದೇಶಗಳ 77 ಸೌಹಾರ್ದ ಪ್ರತಿನಿಧಿಗಳು ಈ ಅಧಿವೇಶನಕ್ಕೆಂದು ಬಂದಿದ್ದರು. ಸಿ ಪಿ. ಐ.(ಎಂ)ಪರವಾಗಿ ಪಾಲಿಟ್‌ಬ್ಯೂರೋ ಸದಸ್ಯ ಕಾಂ. ಇ. ಬಾಲಾನಂದನ್ ಹಾಜರಿದ್ದರು.

ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ 27ನೇ ಅಧಿವೇಶನ ಅಂಗೀಕರಿಸಿದ ರಾಜಕೀಯ ವರದಿ ಹಾಗೂ ಹೊಸ ಕಾರ್ಯಕ್ರಮ, ಹೊಸ ತಾಂತ್ರಿಕ ಸಂದರ್ಭದಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಸೃಜನಾತ್ಮಕವಾಗಿ ಶ್ರೀಮಂತಗೊಳಿಸುವಲ್ಲಿ ಒಂದು ದೊಡ್ಡ ಕೊಡುಗೆ.

—ಕೇಂದ್ರ ಸಮಿತಿ–ಮಂಗೋಲಿಯನ್ ಕಮ್ಯುನಿಸ್ಟ್ ಪಕ್ಷ

ಅಧಿವೇಶನ ಸರ್ವಾನುಮತದಿಂದ ಅಂಗೀಕರಿಸಿದ ಪ್ರಧಾನ ಕಾರ್ಯದರ್ಶಿಗಳ ವರದಿ ಯುದ್ಧ ಹಾಗೂ ಶಾಂತಿಯ ಪ್ರಶ್ನೆ ಇಂದಿನ ಅತ್ಯಂತ ತುರ್ತಿನ ಹಾಗೂ ತೀವ್ರ ಸಮಸ್ಯೆಯೆಂದು ಹೇಳಿ ಸೋವಿಯತ್ ಒಕ್ಕೂಟದ ಶಾಂತಿ ಪ್ರಯತ್ನಗಳನ್ನು ಸಂಪೂರ್ಣವಾಗಿ ಬೆಂಬಲಿಸಿ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಈ ಬಗ್ಗೆ ತಳೆದಿರುವ ಉದ್ದೇಶಪೂರ್ಣ ಮೌನವನ್ನು ತೀವ್ರವಾಗಿ ಖಂಡಿಸಿತು.

ಏಶ್ಯಾ ಹಾಗೂ ಶಾಂತಸಾಗರ ವಲಯದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಧೋರಣೆಗಳಿಂದಾಗಿ ಪರಿಸ್ಥಿತಿ ಹದಗೆಡುತ್ತಿರುವಾಗ ಈ ಖಂಡದಲ್ಲಿ ಶಾಂತಿ ಹಾಗೂ ಸ್ಥಿರತೆ ಕಾಪಾಡುವ ಸಮಸ್ಯೆಗಳ ಬಗ್ಗೆ ಚರ್ಚಿಸಲು ಏಶ್ಯಾ ಹಾಗೂ ಶಾಂತಸಾಗರ ದೇಶಗಳ ಕಮ್ಯುನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳ ಪ್ರತಿನಿಧಿಗಳ ಸಭೆ ನಡೆಯಬೇಕೆಂದು ಸೂಚಿಸುತ್ತಾ, ಅದರ ತಯಾರಿ ಹಾಗೂ ನಿರ್ವಹಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಪಕ್ಷ ಸಿದ್ಧವಿರುವುದಾಗಿ ವರದಿಯಲ್ಲಿ ಹೇಳಲಾಯಿತು.

ದೇಶದ ಏಳನೇ ಪಂಚವಾರ್ಷಿಕ ಯೋಜನೆಯ, ಗುರಿಸಾಧನೆ ಹಾಗೂ ಕೊರತೆಗಳ ಬಗ್ಗೆ ವಿವರವಾದ ಚರ್ಚೆ ನಡೆಸಿದ ಅಧಿವೇಶನ 1986-90 ರ ಅವಧಿಯಲ್ಲಿ ಮಂಗೋಲಿಯಾದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಕರಡು ರೂಪರೇಷೆಗಳನ್ನು ಚರ್ಚಿಸಿ ಅಂಗೀಕರಿಸಿತು.

ಅಧಿವೇಶನ ಚುನಾಯಿಸಿದ ಹೊಸ ಕೇಂದ್ರ ಸಮಿತಿಯಲ್ಲಿ ಕಾಮ್ರೇಡ್ ಬಾತ್ಮಾನಿಕ್ ಪ್ರಧಾನ ಕಾರ್ಯದರ್ಶಿಗಳಾಗಿ ಪುನರಾಯ್ಕೆಗೊಂಡರು. ಅಧಿವೇಶನ ನಡೆಯುತ್ತಿದ್ದಾಗ ರಾಜಧಾನಿ ಉಲನ್-ಬೆತೊರ್‌ನಲ್ಲಿ ಹಬ್ಬದ ಅತ್ಯುತ್ಸಾಹದ ವಾತಾವರಣ ಎಲ್ಲೆಲ್ಲೂ ಕಾಣಸುತ್ತಿತ್ತು ಎಂದು ಸಿ.ಪಿ.ಐ.(ಎಂ) ಪರವಾಗಿ ಭಾಗವಹಿಸಿದ ಕಾಂ. ಬಾಲಾನಂದನ್ ವರ್ಣಿಸಿದ್ದಾರೆ.

ಶುಭ್ರ ಆಕಾಶ, ಹೊಂಬಿಸಿಲು ಮತ್ತು ಶಾಂತಿಯಿರಲಿ

ಸೋವಿಯತ್ ಶಾಲಾ ಬಾಲಿಕೆ ಹನ್ನೊಂದು ವರ್ಷದ ಕಾತ್ಯಾ ಲೈಚೇವಾ ಚಿಕಾಗೋದಲ್ಲಿ ಅಮೇರಿಕಾದ ತನ್ನ ಸಮವಯಸ್ಕರನ್ನು ಉದ್ದೇಶಿಸಿ ಈ ರೀತಿ ಹಾರೈಸಿದಾಗ ಅಮೇರಿಕದ ಎನ್. ಬಿ ಸಿ ಟಿ. ವಿ. ಯ ಸುದ್ದಿ ಪ್ರಸಾರಕ "ಏನದ್ಭುತ" ಎಂದು ಉದ್ಗಾರವೆತ್ತಿದನಂತೆ. ಮಾರ್ಚ್ 23 ರಿಂದ ಅಮೇರಿಕದಲ್ಲಿ ಸುಮಾರು ಎರಡು ವಾರಗಳ ಕಾಲ ಸೋವಿಯತ್ ಜನತೆಯ ಪುಟ್ಟ ಶಾಂತಿ ದೂತೆಯಾಗಿ ಕಾತ್ಯಾ ಸಂಚರಿಸುತ್ತಿದ್ದ ಅವಧಿಯಾದ್ಯಂತ ಅಮೇರಿಕದ ಟಿ. ವಿ. ಹಾಗೂ ಇತರ ಸುದ್ದಿ ಮಾಧ್ಯಮಗಳು ಸೋವಿಯತ್ ಒಕ್ಕೂಟದ ಬಗ್ಗೆ ತಮ್ಮ ಎಂದಿನ ಪೂರ್ವಗ್ರಹಗಳನ್ನು ಬದಿಗಿಟ್ಟದ್ದವಂತೆ.

ಪುಟ್ಟ ಕಾತ್ಯಾ ಸೋವಿಯತ್ ಒಕ್ಕೂಟದ ಶಾಂತಿ ನಿಯೋಗದ ಒಬ್ಬ ಸದಸ್ಯೆಯಾಗಿ ಅಮೇರಿಕದ ಶಾಂತಿ ಸಾಧಕ ಮಕ್ಕಳ ಸಂಘಟನೆಯ ಆಹ್ವಾನದ ಮೇರೆಗೆ ಅಮೇರಿಕಾದ ಸಂದರ್ಶನಕ್ಕೆ ಹೋಗಿದ್ದಳು. ಅಮೇರಿಕನ್ ಶಾಲಾ ತರಗತಿಗಳಲ್ಲಿ ಜಂಟಿ ಪಾಠಗಳು, ಸೋವಿಯತ್ ಮಕ್ಕಳ ಬಗ್ಗೆ ಕಾತ್ಯಾಳ ಕಥೆಗಳು, ವಿವರಗಳು, ಅಮೇರಿಕನ್ ಮಕ್ಕಳ ಪ್ರಿಯ ಪ್ರವಾಸ ತಾಣಗಳಿಗೆ ಭೇಟಿ, ಸ್ಮಾರಕ ಮತ್ತು ವಿನ್ಯಾಸಗಳ ವಿನಿಮಯ ಕಾತ್ಯಾಳ ಎರಡು ವಾರಗಳ ಸಂದರ್ಶನದ ಕಾರ್ಯಕ್ರಮಗಳಾಗಿದ್ದವು.

ಅಂತಹ ಒಂದು ಕಾರ್ಯಕ್ರಮದ ಅಂಗವಾಗಿ ಶ್ವೇತಭವನಕ್ಕೆ ಭೇಟಿ ನೀಡಿದಾಗ "ಅಕಸ್ಮಾತ್ತಾಗಿ" ಅಮೇರಿಕನ್ ಅಧ್ಯಕ್ಷ ರೋನಾಲ್ಡ್ ರೀಗನ್‌ರನ್ನು ಕಂಡಾಗ "ಕೆಲವು ಸಮಯದ ಹಿಂದೆಯಷ್ಟೇ ಸೋವಿಯತ್ ಒಕ್ಕೂಟ ಎಲ್ಲಾ ಪರಮಾಣು ಅಸ್ತ್ರಗಳನ್ನು ಈ ಶತಮಾನದ ಅಂತ್ಯದೊಳಗೆ ನಿರ್ನಾಮ ಮಾಡುವ ಪ್ರಸ್ತಾಪ ಮಾಡಿತ್ತು. ನಾನು ದೊಡ್ಡವಳಾಗಿರುವ ಸಮಯ ಅದು. ನಾನು ಜಗತ್ತು ಹಾಗಿರಬೇಕೆಂದು ಬಯಸುತ್ತೇನೆ. ಜಗತ್ತಿನ ಎಲ್ಲಾ ಮಕ್ಕಳು ಸಂತೋಷವಾಗಿರಬೇಕೆಂದು ಬಯಸುತ್ತೇನೆ" ಎಂದಳು ಕಾತ್ಯಾ. ಕಾತ್ಯಾಳ ಈ ಮಾತನ್ನು ಶ್ವೇತಭವನ ಹೊರಗೆಡಹಲಿಲ್ಲ. ಆದರೆ ತಾನು ಶಾಂತಿ ಬಯಸುವುದಕ್ಕಾಗಿ ಹಾಗೂ ಅದಕ್ಕಾಗಿ ದುಡಿಯುವುದಾಗಿ ರೇಗನ್ ಉತ್ತರಿಸಿದರಂತೆ. ಆ ಪ್ರಕಾರ ಆತ ನಡೆದುಕೊಳ್ಳುವ ಕುರುಹು ಲಕ್ಷಣ ಬಂದಿಲ್ಲವೆಂಬುದು ಬೇರೆ ಮಾತು.

ಕಾತ್ಯಾ ಹೋದಲ್ಲೆಲ್ಲ ಸಾಮಾನ್ಯವಾಗಿ ಹಾರ್ದಿಕ ಸ್ವಾಗತ ಅಮೇರಿಕನ್ ಮಕ್ಕಳಿಂದ, ಅವರ ಶಾಂತಿಪ್ರೇಮಿ ಪೋಷಕರಿಂದ ಕಾದಿತ್ತು. ವಾಶಿಂಗ್ಟನ್‌ನ ಒಂದು ಶಾಲೆಯ ಅಮೇರಿಕನ್ ಮಕ್ಕಳು ಶಾಂತಿಗಾಗಿ ಇನ್ನಷ್ಟು ಕಷ್ಟಪಟ್ಟು ದುಡಿಯಲು ಸಿದ್ಧವಿರುವುದಾಗಿ ಶಪಥ ಅಂಗೀಕರಿಸಿದರು. ಟೆಕ್ಸಾಸ್‌ನ ಹೂಸ್ಟನ್ ನಗರ ಮಾಸ್ಕೋದ ಲೆನಿನ್ ಅವೆನ್ಯೂ ವಾಸಿ ಈ ಬಾಲಿಕೆಯನ್ನು ತನ್ನ ಗೌರವ ನಾಗರೀಕಳನ್ನಾಗಿ ಮಾಡಿತು "ಹೂಸ್ಟನ್‌ನ ವಾಸಿಗಳಾದ ನಾವು ಹಾಗೂ ಸಮಸ್ತ ಟೆಕ್ಸಾಸ್ ಸೋವಿಯತ್ ಒಕ್ಕೂಟದ ಈ ಪುಟ್ಟ ಶಾಂತಿ ರಾಯಭಾರಿಯನ್ನು ಬರಮಾಡಿಕೊಳ್ಳಲು ಸಂತೋಷಪಡುತ್ತೇವೆ" ಎಂದರು ಅಲ್ಲಿನ ನಗರ ಸಭೆಯ ಸದಸ್ಯ ಇಲೆನ್ಯೋರ್ ಟಿನ್ಸ್‌ಲೆ ಕಾತ್ಯಾಳ ಭೇಟಿಯನ್ನು ವಿರೋಧಿಸಿದವರು ಇಲ್ಲವೇ ಇಲ್ಲವೆಂದೇನಲ್ಲ ಅಮೇರಿಕ ಹಾಗೂ ಸೋವಿಯತ್ ಜನತೆ ಪರಸ್ಪರ ಅಪನಂಬಿಕೆ ತೊರೆಯಬಾರದೆಂದು ಪ್ರಯತ್ನಿಸುವ ಕೆಟ್ಟ ಜನಗಳಿಂದ ಕಾತ್ಯಾಳಿಗೆ ಬೆದರಿಕೆಗಳು ಬಂದಿದ್ದರು ಅದರಿಂದೇನು ತೊಂದರೆಯಾಗಲಿಲ್ಲ. ಕಾತ್ಯಾಳ ಭೇಟಿ ಅಮೇರಿಕನ್ ಜನಸಾಮಾನ್ಯರಿಗೂ ಆಳುವ ವರ್ಗಗಳು ತುಂಬಿರುವ ಪೂರ್ವಾಗ್ರಹ ಹಾಗೂ ಅಪನಂಬಿಕೆಯನ್ನು ಕಡಿಮೆ ಮಾಡುವಲ್ಲಿ ಬಹಳಷ್ಟು ಸಹಕಾರಿಯಾಗಿದೆ ಎಂದು ಈ ಭೇಟಿಯನು ವ್ಯವಸ್ಥೆ ಮಾಡಿದವರು ಅಭಿಪ್ರಾಯ ಪಟ್ಟಿದ್ದಾರೆ.

ನಾಲ್ಕು ವರ್ಷಗಳ ಹಿಂದೆ ಶಾಂತಿ ಮಕ್ಕಳು ಸಂಘಟನೆಯ ಮುಖ್ಯಸ್ಥೆಯರಾದ ಪೆಟ್ರೀಸಿಯ ಮೊಂಟಾಂಡನ್ ಸೋವಿಯತ್ ಒಕ್ಕೂಟಕ್ಕೆ ಪ್ರಥಮ ಭೇಟಿಯನ್ನು ಯೋಜಿಸುತ್ತಿದ್ದಾಗ ಅಮೇರಿಕನ್ ಮಕ್ಕಳು ಸೋವಿಯತ್‌ಗಳೆಂದರೆ ಭಯಪಡುತ್ತಿದ್ದರಂತೆ. ಆದರೆ ನಂತರ ಅಮೇರಿಕನ್ ಬಾಲಿಕೆ ಸಮಂತಾಸ್ಮಿತಳ ಪತ್ರಕ್ಕೆ ದಿವಂಗತ ಅಂದ್ರೋಪೋವ್‌ರ ಉತ್ತರ ಮತ್ತು ಸಮಂತಾಳ ಸೋವಿಯತ್ ಭೇಟಿಯ ನಂತರ ಸರಕಾರೀ ಅಪಪ್ರಚಾರದ ಪರದೆ ಹರಿಯಲಾರಂಭಿಸಿತು. ಸ್ಮಿತ್‌ಳ ಭೇಟಿ ಈ ಪ್ರಕ್ರಿಯೆಯಲ್ಲಿ ಇನ್ನೊಂದು ಯಶಸ್ವೀ ಹೆಜ್ಜೆ ಎಂದು ಮೊಂಟಾಂಡನ್ ಅಭಿಪ್ರಾಯ ಪಟ್ಟಿದ್ದಾರೆ.

ಸುಮಾರು ಇದೇ ಸಮಯದಲ್ಲಿ ಕ್ಯಾಲಿಫೋರ್ನಿಯದಿಂದ ಇನ್ನೊಂದು ಸುದ್ದಿ ಬಂದಿದೆ. ಸಮಂತಾ ಅಂದ್ರೋಪೋವ್‌ರಿಗೆ ಪತ್ರ ಬರೆದು ಸೋವಿಯತ್ ಒಕ್ಕೂಟಕ್ಕೆ ಬರಲು ಆಹ್ವಾನ ಪಡೆದ ದಿನದಂದೇ ಅಕೆಯ ಬಗ್ಗೆ ಒಂದು ಪ್ರತ್ಯೇಕ ಫೈಲನ್ನು ಅಮೇರಿಕನ್ ಆಂತರಿಕ ಗೂಢಚರ್ಯೆ ಸಂಸ್ಥೆ ಆರಂಭಿಸಿತಂತೆ. ಅದು "ಅಮೇರಿಕನ್ ರಾಷ್ಟ್ರೀಯ ಹಿತಾಸಕ್ತಿ ಹಾಗೂ ವಿದೇಶಾಂಗ ಧೋರಣೆ" ಕುರಿತಾ ಗುಪ್ತ ಫೈಲು ಎಂದು ಆ ಸಂಸ್ಥೆ ಹೇಳಿಕೊಂಡಿದೆ. ಯುದ್ಧ ತಡೆಯಬೇಕೆಂಬ ಪುಟ್ಟ ಅಮೇರಿಕನ್ ಬಾಲಿಕೆ ಸಮಂತಾಳ ಪ್ರಾಮಾಣಿಕ ಬಯಕೆಯನ್ನು ಬುಡಮೇಲು ಕೃತ್ಯಗಳನ್ನು ಕುರಿತಾದ ವಿಶೇಷಜ್ಞರು ಈಗ ಸಮಂತಾ, ಆಕೆಯ ಬಂಧು ಬಳಗ ಹಾಗೂ ಮಿತ್ರರ ಮೇಲಿನ ಹನ್ನೊಂದು ಪುಟದ ಗುಪ್ತ ದಾಖಲೆಯಾಗಿಸಿದ್ದಾರೆ ಎಂದು ಕೆಲವು ಪತ್ರಿಕಾ ಕರ್ತರು ಹೇಳಿದ್ದಾರೆ.

ಸಿ. ಐ. ಟಿ. ಯು ಅಭಿನಂದನೆ

ಪ. ಬಂಗಾಲದಲ್ಲಿ ನಗರ ಸಭೆಗಳಿಗೆ ನಡೆದ ಚುನಾವಣೆಯಲ್ಲಿ ಎಡರಂಗದ ಉಮೇದುವಾರರನ್ನು ಬಹುಮತದಿಂದ ಆರಿಸಿ ತಂದದ್ದಕ್ಕಾಗಿ ಸಿ. ಐ. ಟಿ. ಯು ಪ. ಬಂಗಾಲದ ಜನತೆಯನ್ನು ಅಭಿನಂದಿಸುತ್ತದೆ. ಸಿ. ಪಿ. ಐ (ಎಂ) ಮುಖಂಡತ್ವದ ಎಡರಂಗಕ್ಕೆ ಬೆಂಬಲ ನೀಡುವ ನಿರ್ಧಾರವನ್ನು ಅವರು ಸರಿಯಾಗಿಯೇ ಕೈಗೊಂಡಿದ್ದಾರೆ. ಯಾಕೆಂದರೆ ಆ ಸರಕಾರ ಜನರಿಗೆ ತುರ್ತಿನ ಪರಿಹಾರ ಒದಗಿಸಲು ನಿಷ್ಠೆಯಿಂದ ಕೆಲಸ ಮಾಡುತ್ತದೆ. ಅಷ್ಟೇ ಅಲ್ಲ ಅದು ಪ್ರಜಾಪ್ರಭುತ್ವದ ಮುಂದಾಳಾಗಿ ಕೆಲಸ ಮಾಡುತ್ತಿದೆ.

ಈ ವಿಜಯದ ಮೂಲಕ ಕಾರ್ಮಿಕ ವರ್ಗಕ್ಕೂ, ಪ. ಬಂಗಾಲದ ಜನತೆಗೂ ಸಲ್ಲಿಸಿದ ಅಪೂರ್ವ ಸೇವೆಗಾಗಿ ತನ್ನ ಉಪಾಧ್ಯಕ್ಷರಾದ ಪ. ಬಂಗಾಲದ ಮುಖ್ಯಮಂತ್ರಿ ಜ್ಯೋತಿ ಬಸು ಹಾಗೆಯೇ ರಾಜ್ಯ ಸಿ.ಐ.ಟಿ.ಯು ಮುಖಂಡರನ್ನು ಸಿ.ಐ.ಟಿ.ಯು ಅಭಿನಂದಿಸುತ್ತದೆ.

ಸಾಹಿತ್ಯದಿಂದ ಜಗತ್ತನ್ನೇ ಎಚ್ಚರಿಸಿದ
ಮ್ಯಾಕ್ಸಿಂ ಗಾರ್ಕಿ

ಮ್ಯಾಕ್ಸಿಂಗಾರ್ಕಿಯ ಹೆಸರು ಜಗತ್ತಿನೆಲ್ಲಾ ಸಮತಾವಾದಿಗಳಿಗೆ ಜನಪರ ಸಾಹಿತಿಗಳಿಗೆ ಬಹಳ ಪ್ರಿಯವಾದ ಹೆಸರು. ಅವರ "ತಾಯಿ" ಕಾದಂಬರಿಯನ್ನು ಓದದವರಾರು ? ಸಮಾಜವಾದ ಸ್ಥಾಪನೆಗಾಗಿ ಝಾರ್‌ನ ರಷ್ಯಾದಲ್ಲಿ ಮೂಡಿಬರುತ್ತಿದ್ದ ಹೋರಾಟದ ಜೊತೆ ಜೊತೆಗೆ ಬೆಳೆದು ಬಡಕುಟುಂಬದಲ್ಲಿ ಜನಿಸಿ ಜಗತ್ತನ್ನೇ ತನ್ನ ವಿಶ್ವ ವಿದ್ಯಾಲಯವಾಗಿಸಿಕೊಂಡ ಗಾರ್ಕಿಯವರು "ಸಮಾಜವಾದಿ ವಾಸ್ತವತೆ" ಎಂಬ ಸಾಹಿತ್ಯ ಪರಂಪರೆಯ ಹರಿಕಾರರು.

ಸಮಾಜ ವಾದವನ್ನೇ ತನ್ನ ಸಾಹಿತ್ಯದ ಜೀವಬಿಂದುವಾಗಿಸಿದರೂ ಅವರ ಸಾಹಿತ್ಯ ಕೇವಲ ಘೋಷಣೆಯಾಗದೆ ಅತ್ಯುತ್ತಮ ಸಾಹಿತ್ಯವೆಂದು ಪರಿಗಣಿತವಾಯಿತು ಸಾಮಾಜಿಕ ವಾಸ್ತವವನ್ನು ಅನ್ವೇಷಿಸುತ್ತಾ, ಮಾನವ ಜೀವಗಳ ಪರಸ್ಪರ ಸಂಬಂಧದಲ್ಲಿ ಬದಲಾವಣೆಯ ಬೇರುಗಳನ್ನರಸುತ್ತಾ, ಇಂದಿನ ಸಮಾಜದಲ್ಲಿ ಹುದುಗಿರುವ ಮುಂದಿನ ಸಮಾಜದ ಬೀಜವನ್ನು ಎತ್ತಿ ತೋರಿಸಿದವರು, ಅದನ್ನು ಲಕ್ಷಾಂತರ ಮನಸ್ಸುಗಳಲ್ಲಿ ನೆಟ್ಟು ನೀರೆರೆದು ಪೋಷಿಸಿದವರು ಗಾರ್ಕಿ. ಗಾರ್ಕಿಯವರ ಮರಣದ 50ನೇ ವಾರ್ಷಿಕ ಜೂನ್ 18 ರಂದು ಗಾರ್ಕಿಯವರ ನೆನಪಿಗಾಗಿ ನಾವು ಸಮಾಜವಾದಿ ಸಮಾಜ ನಿರ್ಮಾಣದ ಹೋರಾಟದಲ್ಲಿ ಸಾಹಿತ್ಯದ ಪಾತ್ರದ ಬಗ್ಗೆ, ಭಾರತದಲ್ಲಿ ಹುದುಗಿರುವ ಕ್ರಾಂತಿಯ ಬೀಜಗಳನ್ನು ಅರಿಸಿ ಪೋಷಿಸುವ ಬಗ್ಗೆ. ಸಾಹಿತ್ಯದಲ್ಲಿ ಮೂಡಿಸುವ ಬಗ್ಗೆ ಚಿಂತನ ನಡೆಸೋಣ.

-ಜಿ ಎನ್. ನಾಗರಾಜ್

ಶಿಕ್ಷಣದ ಖಾಸಗೀಕರಣ

(3ನೇ ಪುಟದಿಂದ)

ಪಾಳೆಯಗಾರಿ ಪದ್ಧತಿಯಲ್ಲಿ ಶಿಕ್ಷಣ ಕೇವಲ ಖಾಸಗಿ ಒಡೆತನದಲ್ಲಿಯೇ ಇತ್ತು. ಗೌಡ ದೇಸಾಯಿಯರುಗಳ ಆಶ್ರಯದಲ್ಲಿ ಓದುಮಠ, ಸಾಲಿಮಠವಾಗಿ ಭಾರತದಲ್ಲಿ ಬಂಡವಾಳಶಾಹಿ ತಲೆಯೆತ್ತಲಾರಂಭಿಸಿದಾಗ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಅನೇಕ ಕಡೆ ರಾಷ್ಟ್ರ ಪ್ರೇಮಿ ಶಿಕ್ಷಣ ಸಂಸ್ಥೆಗಳು ತಲೆ ಎತ್ತಿದುವು.

ಸ್ವಾತಂತ್ರ್ಯ ಬಂದ ಮೇಲೆ ಶಿಕ್ಷಣದ ಜವಾಬುದಾರಿಯನ್ನು ಹೊತ್ತ ಸರಕಾರ ಈ ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಿಸಿ ತನ್ನ ಸರ್ವ ಸ್ವಾಮ್ಯವನ್ನು ಸ್ಥಾಪಿಸುವುದು ಬಿಟ್ಟು ಖಾಸಗಿ ಶಿಕ್ಷಣ ಸಂಸ್ಥೆಗಳ ಆರಂಭಕ್ಕೆ ಪ್ರೋತ್ಸಾಹ ನೀಡಲಾರಂಭಿಸಿತು.

ಖಾಸಗೀಕರಣದ ಪ್ರಮಾಣ

ನಮ್ಮ ರಾಜ್ಯದಲ್ಲಿ ಖಾಸಗೀಕರಣದ ಪ್ರಮಾಣವೆಷ್ಟು ಎಂಬುದನ್ನು ನೋಡೋಣ (ಈ ಅಂಕಿ ಸಂಖ್ಯೆಗಳು 85-86 ಕ್ಕೆ ಸಂಬಂಧಿಸಿದುವು).

ಪ್ರಾಥಮಿಕ ಶಿಕ್ಷಣದಲ್ಲಿ ಅತಿಕಡಿಮೆ ಪ್ರಮಾಣದಲ್ಲಿ ಆರಂಭವಾಗಿ ಕಾಲೇಜುಗಳ ಹಂತದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿದೆ ಖಾಸಗೀಕರಣ ಪ್ರಾಥಮಿಕ ಶಾಲೆಯಲ್ಲಿ-ಅದರಲ್ಲಿಯೂ ಗ್ರಾಮೀಣ ಪ್ರದೇಶಗಳಲ್ಲಿ- ಲಾಭವಿಲ್ಲದಿರುವುದರಿಂದಲೇ ಅಲ್ಲಿ ಸರಕಾರಿ ಶಾಲೆಗಳೇ ಹೆಚ್ಚು ಇರುವಷ್ಟು ಪ್ರಾಥಮಿಕ ಶಾಲೆಗಳು ನಗರ ಪ್ರದೇಶದಲ್ಲಿ ಆಂಗ್ಲ ಮಾಧ್ಯಮದ ಮಾರಿಗೆ ಮಕ್ಕಳ ಬುದ್ಧಿ ಮತ್ತೆ ಬಲಿಕೊಡುವುದಕ್ಕಾಗಿ ಹುಟ್ಟಿದವು.

ಈಗ ಖಾಸಗೀಕರಣದ ವೈಖರಿ ನೋಡಿ.

	ಸರಕಾರಿ	ಖಾಸಗಿ	ಖಾಸಗಿ ಸಂಸ್ಥೆಗಳ ಶೇಕಡಾವಾರು
ಪ್ರಾಥಮಿಕ ಶಾಲೆ	34780	3000	8 %
ಪ್ರೌಢ ಶಾಲೆ	1178	2700	70 %
ಕೈಗಾರಿಕಾ ತರಬೇತಿ ಸಂಸ್ಥೆಗಳು (ITI)	33	180	83 %
ಪಾಲಿಟೆಕ್ನಿಕ್‌ಗಳು	31	131	71 %
ಪದವಿಕಾಲೇಜುಗಳು	76	284	72 %
ಮೆಡಿಕಲ್ ಕಾಲೇಜುಗಳು	4	10	71 %
ಇಂಜನಿಯರಿಂಗ್ ,,	4	35	90 %

ಖಾಸಗಿ ಶಿಕ್ಷಣದ ಲಾಭ ಬಡಕತನ ಈ ಚಿತ್ರವನ್ನು ನೋಡಿದರೆ ಸಾಕು ತಿಳಿಯುತ್ತದೆ. ಗುಂಡೂರಾಯರ ಕಾಲದಲ್ಲಿ 1980 ರಲ್ಲಿ ಆರಂಭವಾದ ಈ ಖಾಸಗಿ ಮೆಡಿಕಲ್ ಇಂಜನಿಯರಿಂಗ್ ಕಾಲೇಜುಗಳ ಹೊಸ ವಾಣಿಜ್ಯ ಬೆಳೆ ಅಲ್ಲಿಯ ವರೆಗೂ ಪೂರ್ಣವಾಗಿ ಸರಕಾರಿ ನಿಯಂತ್ರಣದಲ್ಲಿದ್ದ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೂ ಪಾಲಿಟೆಕ್ನಿಕ್‌ಗಳಿಗೂ ಹಬ್ಬಿ ಕೇವಲ 5-6 ವರ್ಷದಲ್ಲಿ ಶೇ 70 ರಿಂದ 90 ರ ವರೆಗೂ ಈ ಕ್ಷೇತ್ರವನ್ನು ಆಕ್ರಮಿಸಿದೆ.

ಡೊನೇಷನ್, ಕ್ಯಾಪಿಟೇಷನ್‌ಗಳನ್ನು ತೆಗೆದುಹಾಕುತ್ತೇನೆಂಬ ಘೋಷಣೆಯ ಮೇಲೆ ಆರಿಸಿಬಂದ ಜನತಾ ಸರಕಾರದ ಕಾಲದಲ್ಲಿಯೂ ಈ ಪ್ರಕ್ರಿಯೆ ನಿರಾತಂಕವಾಗಿ ಮುಂದುವರೆಯಿತು.

ಮಠ ಚರ್ಚುಗಳ ಹಿಡಿತದಲ್ಲಿ

ಹೀಗೆ ಖಾಸಗಿ ಸಂಸ್ಥೆಗಳು ಹೆಚ್ಚುತ್ತಿರುವುದರ ಪರಿಣಾಮವೇನು ? ಈ ಖಾಸಗಿ ಶಾಲಾ ಕಾಲೇಜುಗಳು ಯಾರ ಹಿಡಿತದಲ್ಲಿವೆ ? ಈ ಶಿಕ್ಷಣ ಸಂಸ್ಥೆಗಳು ಚರ್ಚುಗಳ, ಲಿಂಗಾಯತ ಇತರ ಜಾತಿಯ ಮಠಗಳ ಸಂಸ್ಥೆಗಳ ಹಿಡಿತದಲ್ಲಿವೆ. ಸರಕಾರದ ಆಡಳಿತದಲ್ಲಿದ್ದು ಜಾತ್ಯಾತೀತ ವೈಜ್ಞಾನಿಕ ಶಿಕ್ಷಣ ನೀಡುವುದಕ್ಕೆ ಬದಲಾಗಿ ಜಾತೀಯ ಧಾರ್ಮಿಕ ಭಾವನೆಗಳನ್ನು ಬಿತ್ತುತ್ತಾ ನೀರೆರೆದು ಪೋಷಿಸುತ್ತಾ ಇವೆ.

ಅದೇ ರೀತಿ ಈ ವಿದ್ಯಾಲಯಗಳಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿ ಪಾಳೆಯಗಾರಿ ಮೌಲ್ಯಗಳನ್ನು ಪೋಷಿಸಿ ಬೆಳೆಸುವುದು, ಗುತ್ತೇದಾರಿ ಭೂಮಾಲಕರ ದಾಸರಾಗುವುದು.ಇಂದು ಕಂಪ್ಯೂಟರ್ ಭ್ರಮೆಯ ಮೋಹದಲ್ಲಿ ಸಿಕ್ಕಿ ಬೀಳುವುದು ಜನಸಾಮಾನ್ಯರ ದುಡಿಯುವ ಜನರ ಹಿತಕ್ಕೆ ವಿರೋಧ, ಜೊತೆಗೆ ಭಾಷಾಂಧತೆ, ಧರ್ಮಾಂಧತೆಯನ್ನು ಪ್ರಚೋದಿಸುವುದು ದೇಶದ ಐಕ್ಯತೆ ಸಮಗ್ರತೆಗೆ ಅಪಾಯ.

ಈ ಅಪಾಯವನ್ನು ನಿರ್ಮೂಲನ ಮಾಡುವ ಹಾದಿಯಲ್ಲಿ ಶಿಕ್ಷಣದ ಖಾಸಗೀಕರಣದ ವಿರುದ್ಧ ಡೊನೇಷನ್ ಕ್ಯಾಪಿಟೇಷನ್‌ಗಳ ವಿರುದ್ಧ ಹೋರಾಡಬೇಕಾದುದು ಅತೀ ಅವಶ್ಯ.

ಪಕ್ಷದ ಮಹಾರಾಷ್ಟ್ರ ರಾಜ್ಯ ಸಮಿತಿ ನಿಲುಮೆ

(ಮೊದಲನೇ ಪುಟದಿಂದ)

ಧೋರಣೆ ವಿರುದ್ಧ ಬೆಳೆಯುತ್ತಿರುವ ವಿರೋಧ, ಸರಕಾರದ ಹೊಸ ಶಿಕ್ಷಣ ನೀತಿ, ಆಧುನೀಕರಣ, ಮುಸ್ಲಿಂ ಮಹಿಳಾ ಕಾಯಿದೆಗಳ ವಿರುದ್ಧ ಪ್ರತಿರೋಧ ಬೆಳೆದು ಬರುತ್ತಿರುವುದನ್ನು ಕಾಣುತ್ತೇವೆ.

ಇಂಥಹ ಜ್ವಲಂತಸಮಸ್ಯೆಗಳವಿರುದ್ಧ ಸಂಯುಕ್ತ ಚಳುವಳಿ ನಡೆಸುವ ಜವಾಬ್ದಾರಿ ವಿರೋಧ ಪಕ್ಷಗಳ ಮೇಲೆ ಬಿದ್ದಿದೆ. ಆದರೆ ಅವುಗಳನ್ನೆಲ್ಲ ಮೂಲೆಗೊತ್ತಿ ಗಡಿ ಪ್ರಶ್ನೆಯೇ ಈಗಿರುವ ಮುಖ್ಯ ಹೋರಾಟವೆಂದು ತಿಳಿಯುವುದರ ಅರ್ಥವೇನೆಂದರೆ ಮೂಲಭೂತ ಪ್ರಶ್ನೆಗಳ ಕುರಿತಾದ ಜನರ ದೃಷ್ಟಿಯನ್ನು ಬೇರೆಡೆ ತಿರುಗಿಸುವುದಾಗಿದೆ.ಅದು ರಾಜಕೀಯ ಪಲಾಯನವಾದವೇ ಸರಿ.

ಜನರ ಮುಖ್ಯ ಪ್ರಶ್ನೆಗಳ ಬದಲಾಗಿ ಜಾತಿ, ಧರ್ಮ, ಮತ್ತು ಭಾಷೆ ಪ್ರಶ್ನೆಗಳತ್ತ ಅವರ ಗಮನ ಹರಿಸುವಂತೆ ಮಾಡುವುದು ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷದ ಧೋರಣೆಯಾಗಿದೆ. ಇಂಥ ಚಳುವಳಿಯ ಸಹಾಯ ವಿರೋಧ ಪಕ್ಷಗಳಿಗೆ ತಿಳಿಯದೆಯೇ ಕಾಂಗ್ರೆಸ್‌ಗೆ ಲಭ್ಯವಾಗುತ್ತದೆಂದು ನಮ್ಮ ತಿಳುವಳಿಕೆ.

ಮಹಾರಾಷ್ಟ್ರ-ಕರ್ನಾಟಕ ಗಡಿ ಪ್ರಶ್ನೆಯನ್ನು ಗ್ರಾಮ ಘಟಕವನ್ನಾಗಿ ಹಿಡಿದು, ಭಾಷೆ-ಭೌಗೋಳಿಕ ಸಂಲಗ್ನತೆಯ ತತ್ವದಂತೆ ಬಗೆಹರಿಸಬೇಕೆಂಬ ನಮ್ಮ ನಿಲುವೇ ಹಿಂದೆ ಸ್ಪಷ್ಟವಾಗಿತ್ತು. ಈಗಲೂ ಅದೇ ನಿಲುವೆಯಾಗಿದೆ. ಕರ್ನಾಟಕದಲ್ಲಿರುವ ನಮ್ಮ ಪಕ್ಷ ಕೂಡ ಇದೇ ನಿಲುವೆಯನ್ನು ತಾಳಿರುವುದರಿಂದ ನಮಗೆ ಅಭಿಮಾನವೆನಿಸಿದೆ. ಯಾಕೆಂದರೆ ಅದು ನಮ್ಮ ಅಖಿಲ ಭಾರತ ಪಕ್ಷದ ನಿಲುವೆಯಾಗಿದೆ.

ಚರ್ಚೆ ಮೂಲಕವೇ ಈ ಪ್ರಶ್ನೆ ಬಗೆಹರಿಸಬೇಕು

ದೇಶ ಮತ್ತು ಮಹಾರಾಷ್ಟ್ರದಲ್ಲಿರುವ ವಿಶಿಷ್ಟ ರಾಜಕೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರಕಾರದ ಆರ್ಥಿಕ. ರಾಜಕೀಯ ದೋರಣೆಗಳ ವಿರುದ್ಧ ದೇಶದಲ್ಲಿರುವ ಛಿದ್ರಕಾರಿ, ಭಯೋತ್ಪಾದಕ ಶಕ್ತಿಗಳ ವಿರುದ್ಧ ಹೋರಾಡುವುದು ನಮ್ಮ ಇಂದಿನ ಮುಖ್ಯ ಜವಾಬ್ದಾರಿ. ಇಂಥ ಪರಿಸ್ಥಿತಿಯಲ್ಲಿ ಭಾಷೆಯ ಪ್ರಶ್ನೆ ಎಬ್ಬಿಸುವುದು ಗಂಡಾಂತರಕಾರಿ. ಬೆಳಗಾವಿ, ನಿಪ್ಪಾಣಿ, ಸಂಕೇಶ್ವರಗಳಲ್ಲಿಯ ದಂಗೆಗಳಿಂದ ಅದು ಸ್ಪಷ್ಟ ಕಂಡುಬರುತ್ತಿದೆ

ಮುಂಬಯಿಯ ಕನ್ನಡ ಶಾಲೆಗಳನ್ನು ಮುಚ್ಚುವ ಶಿವಸೇನೆಯ ಕಾರ್ಯಕ್ರಮ ಮುಂಬಯಿಯಲ್ಲಿ ಕೂಡ ಗಂಭೀರ ಪರಿಸ್ಥಿತಿ ಉಂಟುಮಾಡುತ್ತದೆ.

ಮರಾಠಿ-ಕರ್ನಾಟಕ ಗಡಿ ಪ್ರಶ್ನೆಯನ್ನು ಸಹಕಾರ ಮತ್ತು ಮಿತ್ರತ್ವದಿಂದ ಚರ್ಚಿಸಿ ಬಗೆಹರಿಸಬೇಕೆಂಬುದು ನಮ್ಮ ಪಕ್ಷದ ನಿಲುವೆಯಾಗಿದೆ. ನಿಮ್ಮ ನಿಲುವೆಯ ಪುನರ್ವಿಚಾರ ಮಾಡಬೇಕೆಂದು ನಮ್ಮ ಇಚ್ಛೆ.

ಅಹಲ್ಯಾ ರಂಗ್ನೇಕರ್,
ಕಾರ್ಯದರ್ಶಿ.

ಮಹಾರಾಷ್ಟ್ರ ರಾಜ್ಯಸಮಿತಿ, ಸಿ.ಪಿ.ಐ. (ಎಂ). (ಮಹಾರಾಷ್ಟ್ರ ಸಿ.ಪಿ.ಐ (ಎಂ) ಪಕ್ಷದ ಮುಖ ಪತ್ರಿಕೆ "ಜೀವನ್ ಮಾರ್ಗ" ವಾರ ಪತ್ರಿಕೆಯ 8-6-86 ರ ಸಂಪಾದಕೀಯ)

ಪವಾರ್-ಜೋಶಿ ಹಠವಾದ ಬಿಟ್ಟು ಕೊಡಲಿ

ಮುಖಂಡರು ಘೋಷಿಸಿದಂತೆಗಾಂಧೀವಾದ ಪದ್ಧತಿಯಲ್ಲಿ ಸತ್ಯಾಗ್ರಹ ನಡೆದಿದ್ದರೆ, ಪೋಲೀಸ್ ಸ್ಟೇಶನ್ನಿನ ಮೇಲೆ ಹಲ್ಲೆಯಾಕೆ ನಡೆಯಿತು. ಬೆಳಗಾವಿ ನೀರು ಪೂರೈಕೆಯನ್ನು ಕೆಡಿಸುವ ಸಂಘಟಿತ ಪ್ರಯತ್ನ ಯಾಕೆ ನಡೆಯಿತು. 5-10ತರುಣರು ಯಾಕೆ ಸಾಯಬೇಕಾಯಿತು.

ಹೆಗಡೆಯವರು ಆಮಂತ್ರಿಸಿದರೂ ಕೂಡ ಶರದ್ ಪವಾರ್, ಎಸ್. ಎಂ. ಜೋಶಿ ಅವರು ಕೂಡ ಚರ್ಚಿಸಲು ಹೋಗದಿರುವುದು ಅವರಿಬ್ಬರ ಹಟವಾದಿ ವರ್ತನೆಯಾಗಿದೆ. ಅವರು ಹೆಗಡೆಯವರ ಜೊತೆಯಲ್ಲಿ ಗಡಿ ಪ್ರದೇಶದಲ್ಲಿ ಕನ್ನಡ ಭಾಷೆ ಕಡ್ಡಾಯದ ಕುರಿತು ಚರ್ಚಿಸಲು ಆಂದೋಲನವನ್ನು ಕೆಲವು ದಿವಸಮುಂದೆ ಹಾಕಿದ್ದರೆ ಈ ದುರ್ಘಟನೆ ಸಂಭವಿಸುತ್ತಿರಲಿಲ್ಲ. ಮೊದಲು ನನ್ನ ಮಾತು ಒಪ್ಪು ನಂತರ ಚರ್ಚೆಗೆ ಬರುತ್ತೇನೆಂದು ಹೇಳುವುದು ಸರಿಯಲ್ಲ.

ಗಡಿಯಲ್ಲಿಯ ಭಾಷೆ ಚಳುವಳಿಯಿಂದಾಗಿ ಮುಂಬಯಿಯಲ್ಲಿ ಕನ್ನಡಶಾಲೆ ಸಿನಿಮಾಗಳ ಮೇಲೆ ಹಲ್ಲೆ ನಡೆದಿದೆ. ಇದರ ಪ್ರತಿಕ್ರಿಯೆ ಕರ್ನಾಟಕದಲ್ಲಾದರೆ ಅದರ ಪರಿಣಾಮ ಎಷ್ಟು ಭಯಾನಕವಾಗುತ್ತದೆಂಬುದನ್ನ ಪಂಜಾಬ-ಅಸ್ಸಾಂ ಘಟನೆಗಳು ತೋರಿಸಿಕೊಟ್ಟಿವೆ

ಈಗ ಶರದ್ ಪವಾರ್ ಎಸ್. ಎಂ. ಜೋಶಿಯಂಥ ಮುಖಂಡರು ಪ್ರಾರಂಭಿಸಿರುವ ಆಟವನ್ನು ಇಂದಿರಾ ಕಾಂಗ್ರೆಸ್ ಹಿಂದೂ ಜಾತೀಯವಾದಿ, ಶಿವಸೇನೆಗಳು ದುರುಪಯೋಗ ಮಾಡಿಕೊಳ್ಳುವುದು ಸ್ಪಷ್ಟ.

ಆದ್ದರಿಂದ ಎಡ ಮತ್ತು ದೇಶದ ಐಕ್ಯತೆ ಕಾಪಾಡಬೇಕೆನ್ನುವ ಶಕ್ತಿಗಳೆಲ್ಲ ಇಂಥ ಗಂಡಾಂತರದ ವಿರುದ್ಧ ಹೋರಾಡಲು ಮುಂದೆ ಬರಬೇಕು. ಎಲ್ಲ ಕಾರ್ಮಿಕ ಸಂಘಗಳು, ವಿದ್ಯಾರ್ಥಿ ಯುವಕರು ಮಹಿಳಾ ಸಂಘಟನೆಗಳೆಲ್ಲಾ ಒಂದಾಗಿ ಭಾಷೆಯ ತಳಹದಿಯಲ್ಲಿ ವಿಭಜನೆ ಉಂಟುಮಾಡುವ ಶಿವಸೇನೆ ಹಾಗೆಯೇ ಇತರ ಪಕ್ಷಗಳ ಸಂಕುಚಿತ ನಿಲುವೆಯ ವಿರುದ್ಧ ಹೋರಾಡಲು ತಯಾರಾಗಬೇಕು.

(15-6-86ರ ಜೀವನ್ ಮಾರ್ಗ ಸಂಪಾದಕೀಯದ ಮುಖ್ಯಾಂಶ)

Printed & Published by P. Ramachandra Rao on behalf of the Communist Party of India [Marxist] Karnataka State Committee, K. V. Temple Street, Sultanpet, Bangalore-560053
Sultanpet B-53 Phone : 75331 Editorial and manageriel office: L-56, K. V. Temple Street,
Editor P. Ramachandra Rao Managing Editor : N K. Upadhyaya